ಜೆಎಸ್‌ಎಸ್ ಮಹಾವಿದ್ಯಾಪೀಠ, ಮೈಸೂರು
JSS MAHAVIDYAPEETHA, MYSURU


# ಜೆಎಸ್‌ಎಸ್ ವಾರ್ತಾಪತ್ರ

## ಮಾಸಪತ್ರಿಕೆ

# JSS VARTHAPATHRA

*Monthly Magazine*


ಸಂಪುಟ 5 ಸಂಚಿಕೆ 3–5 ಮಾರ್ಚ್–ಮೇ 2020




ಮೈಸೂರಿನ ಶ್ರೀ ಸುತ್ತೂರು ಶಾಖಾಮಠದಲ್ಲಿ ಕೋವಿಡ್–19 ವೈರಾಣು ಸೋಂಕು ನಿಯಂತ್ರಣ ಪರಿಹಾರ ಕಾರ್ಯಗಳಿಗಾಗಿ ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ಶ್ರೀ ಸುತ್ತೂರು ಮಠ, ಜೆಎಸ್‌ಎಸ್ ಮಹಾವಿದ್ಯಾಪೀಠ ಹಾಗೂ ಸಂಸ್ಥೆಯ ಉದ್ಯೋಗಿಗಳು ನೀಡಿರುವ 50 ಲಕ್ಷ ರೂ.ಗಳ ಚೆಕ್ಕನ್ನು ಪರಮಪೂಜ್ಯ ಜಗದ್ಗುರುಗಳವರು ಸಚಿವರಾದ ಶ್ರೀ ವಿ. ಸೋಮಣ್ಣನವರಿಗೆ ನೀಡಿದರು. ಚಿತ್ರದಲ್ಲಿ ಡಾ. ಬಿ. ಸುರೇಶ್, ಶ್ರೀ ಎಸ್. ಪುಟ್ಟಸುಬ್ಬಪ್ಪ, ಡಾ. ಸಿ.ಜಿ. ಬೆಟಸೂರಮಠ, ಶ್ರೀ ಪ್ರತಾಪ ಸಿಂಹ, ಶ್ರೀ ಅಭಿರಾಂ ಜಿ. ಶಂಕರ್ ಶ್ರೀ ಬಿ. ನಿರಂಜನಮೂರ್ತಿ ಹಾಗೂ ಶ್ರೀ ಎಸ್. ಶಿವಕುಮಾರಸ್ವಾಮಿಯವರು




ಮೈಸೂರಿನ ಜೆಎಸ್‌ಎಸ್ ಉನ್ನತ ಶಿಕ್ಷಣ ಹಾಗೂ ಸಂಶೋಧನಾ ಅಕ್ಯಾಡೆಮಿಯಲ್ಲಿ ನಡೆದ ಎನ್‌ಎಸ್‌ಎಸ್ ರಾಷ್ಟ್ರೀಯ ಭಾವೈಕ್ಯತಾ ಶಿಬಿರದಲ್ಲಿ ಭಾಗವಹಿಸಿದ್ದ ಕರ್ನಾಟಕ, ಕೇರಳ, ತಮಿಳುನಾಡು, ಪಾಂಡಿಚೇರಿ, ಆಂಧ್ರಪ್ರದೇಶ, ತೆಲಂಗಾಣ, ಮಹಾರಾಷ್ಟ್ರ ಹಾಗೂ ಕರ್ನಾಟಕದ 22 ವಿಶ್ವವಿದ್ಯಾನಿಲಯಗಳ ವಿದ್ಯಾರ್ಥಿಗಳು ಸುತ್ತೂರು ಶ್ರೀಕ್ಷೇತ್ರಕ್ಕೆ ಭೇಟಿ ನೀಡಿ ಪರಮಪೂಜ್ಯ ಜಗದ್ಗುರುಗಳವರ ಆಶೀರ್ವಾದ ಪಡೆದರು



ಮೈಸೂರಿನ ಶ್ರೀ ಸುತ್ತೂರು ಶಾಖಾಮಠದಲ್ಲಿ ಪರಮಪೂಜ್ಯ ಜಗದ್ಗುರುಗಳವರನ್ನು ಸಚಿವರಾದ ಶ್ರೀ ಎಸ್.ಟಿ. ಸೋಮಶೇಖರ್ ಹಾಗೂ ಶ್ರೀ ಕೆ. ಸುಧಾಕರ್‌ರವರು ಭೇಟಿ ಮಾಡಿ ಕೋವಿಡ್–19 ಕುರಿತು ಚರ್ಚೆ ನಡೆಸಿದ ಸಂದರ್ಭದಲ್ಲಿ ಶ್ರೀ ಬಿ. ಹರ್ಷವರ್ಧನ್, ಶ್ರೀ ಸಿ.ಎಸ್. ನಿರಂಜನ ಕುಮಾರ್, ಶ್ರೀ ಅಡಗೂರು ಎಚ್. ವಿಶ್ವನಾಥ್, ಶ್ರೀಮತಿ ಪುಷ್ಪ ಅಯ್ಯಂಗಾರ್, ಶ್ರೀಮತಿ ವೈದೇಹಿ ಅಯ್ಯಂಗಾರ್‌ರವರು ಉಪಸ್ಥಿತರಿದ್ದರು




ಮೈಸೂರು ನಾಗರಿಕರ ವೇದಿಕೆಯಿಂದ ಕೂಲಿ ಕಾರ್ಮಿಕ ಕುಟುಂಬಗಳಿಗೆ ಪರಮಪೂಜ್ಯ ಜಗದ್ಗುರುಗಳವರ ಸಮ್ಮುಖದಲ್ಲಿ ಆಹಾರಧಾನ್ಯಗಳ ಕಿಟ್‌ಗಳನ್ನು ವಿತರಿಸಲಾಯಿತು. ಚಿತ್ರದಲ್ಲಿ ಶ್ರೀಮತಿ ತಸ್ನೀಮ್, ಶ್ರೀ ಸಿ. ಶ್ರೀಧರ್, ಶ್ರೀ ಅಭಿರಾಂ ಜಿ. ಶಂಕರ್, ಶ್ರೀ ಗುರುದತ್ತ ಹೆಗಡೆ, ಶ್ರೀಮತಿ ಅಶ್ವಿನಿ ಅನಂತ್, ಶ್ರೀ ಜಿ.ಎಸ್. ಸತ್ಯರಾಜ್, ಶ್ರೀ ವಾಸುದೇವ್ ಭಟ್, ಶ್ರೀ ಪಿ.ವಿ. ಗಿರಿ, ಶ್ರೀಮತಿ ರಶ್ಮಿ ಕೋಟಿ, ಶ್ರೀ ಜಗದೀಶ ಬಾಬು, ಡಾ. ಬಾಲಸುಬ್ರಹ್ಮಣ್ಯ, ಡಾ. ಸಿ.ಜಿ. ಬೆಟಸೂರಮಠ ಮತ್ತಿತರರು

## ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ಶ್ರೀ ಸುತ್ತೂರು ಮಠ, ಜೆಎಸ್‌ಎಸ್ ಮಹಾವಿದ್ಯಾಪೀಠ ಹಾಗೂ ಸಂಸ್ಥೆಯ ನೌಕರರಿಂದ 50 ಲಕ್ಷ ರೂ.ಗಳ ಕೊಡುಗೆ

ಕೋವಿಡ್–19 ವೈರಾಣು ಸೋಂಕು ದೇಶ ಹಾಗೂ ರಾಜ್ಯದಲ್ಲಿ ವ್ಯಾಪಕವಾಗಿ ಹರಡಿ ದೇಶಾದ್ಯಂತ ಲಾಕ್‌ಡೌನ್ ಘೋಷಿಸಲಾಗಿದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಈ ರೋಗವನ್ನು ತಡೆಗಟ್ಟುವ ನಿಟ್ಟಿನಲ್ಲಿ ಯುದ್ಧೋಪಾದಿಯಲ್ಲಿ ಎಲ್ಲಾ ರೀತಿಯ ತುರ್ತು ಕ್ರಮಗಳನ್ನು ಕೈಗೊಳ್ಳುತ್ತಿವೆ.

ವೈರಾಣು ಹರಡುವುದನ್ನು ತಡೆಗಟ್ಟಲು ಸರ್ಕಾರದೊಂದಿಗೆ ಕೈಜೋಡಿಸಲು ಹಾಗೂ ಈ ತುರ್ತು ಸ್ಥಿತಿಯ ನಿವಾರಣೆಗಾಗಿ ಶ್ರೀ ಸುತ್ತೂರು ಮಠ, ಜೆಎಸ್‌ಎಸ್ ಮಹಾವಿದ್ಯಾಪೀಠ ಹಾಗೂ ಜೆಎಸ್‌ಎಸ್ ಸಂಸ್ಥೆಯ ನೌಕರರು ಸ್ವಇಚ್ಛೆಯಿಂದ ನೀಡಿರುವ ಮೊಬಲಗನ್ನು ಒಟ್ಟುಗೂಡಿಸಿ ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ 50 ಲಕ್ಷ ರೂ.ಗಳ ಚೆಕ್ಕನ್ನು ಪರಮ ಪೂಜ್ಯ ಜಗದ್ಗುರುಗಳವರು ದಿನಾಂಕ 1.4.2020ರಂದು ಮೈಸೂರಿನ ಶ್ರೀ ಸುತ್ತೂರು ಶಾಖಾಮಠದಲ್ಲಿ ವಸತಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಮಾನ್ಯ ಶ್ರೀ ವಿ. ಸೋಮಣ್ಣನವರಿಗೆ ನೀಡಿದರು.

ಈ ಸಂದರ್ಭದಲ್ಲಿ ಲೋಕಸಭಾ ಸದಸ್ಯರಾದ ಶ್ರೀ ಪ್ರತಾಪ ಸಿಂಹ, ಜಿಲ್ಲಾಧಿಕಾರಿಗಳಾದ ಶ್ರೀ ಅಭಿರಾಮ್ ಜಿ. ಶಂಕರ್, ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿಗಳಾದ ಡಾ. ಸಿ.ಜಿ. ಬೆಟಸೂರಮಠ, ಕಾರ್ಯದರ್ಶಿಗಳಾದ ಶ್ರೀ ಎಸ್. ಶಿವಕುಮಾರಸ್ವಾಮಿ, ಜೆಎಸ್‌ಎಸ್ ಎಎಚ್‌ಇಆರ್‌ನ ಸಮಕುಲಾಧಿಪತಿಗಳಾದ ಡಾ. ಬಿ. ಸುರೇಶ್, ಹಣಕಾಸು ವಿಭಾಗದ ನಿರ್ದೇಶಕರಾದ ಶ್ರೀ ಎಸ್. ಪುಟ್ಟಸುಬ್ಬಪ್ಪ ಹಾಗೂ ಕಾಲೇಜು ಶಿಕ್ಷಣ ವಿಭಾಗದ ಶ್ರೀ ಬಿ. ನಿರಂಜನಮೂರ್ತಿ ಹಾಗೂ ಇತರರು ಉಪಸ್ಥಿತರಿದ್ದರು. □



ಮೈಸೂರಿನ ಜೆಎಸ್‌ಎಸ್ ವೈದ್ಯಕೀಯ ಮಹಾವಿದ್ಯಾಲಯದ ವಿದ್ಯಾರ್ಥಿ ಮಿ. ಶೇಟ್ ಪ್ರಜ್ವಲ್ ಪಿ.ರವರು ಕರ್ನಾಟಕ ರಾಜ್ಯಮಟ್ಟದ ಮುಕ್ತ ರ್‍ಯಾಪಿಡ್ ಮತ್ತು ಬ್ಲಿಟ್ಸ್ ಚದುರಂಗ ಸ್ಪರ್ಧೆಯಲ್ಲಿ ವಿಜೇತರಾದ ಸಂದರ್ಭದಲ್ಲಿ ಪ್ರಾಂಶುಪಾಲರಾದ ಡಾ. ಎಚ್. ಬಸವನಗೌಡಪ್ಪನವರು ಅಭಿನಂದಿಸುತ್ತಿರುವುದು. ಚಿತ್ರದಲ್ಲಿ ಶ್ರೀ ದೊರೆಸ್ವಾಮಿ, ಶ್ರೀ ಲೋಕೇಶ್ ಶೆಟ್ಟರ್, ಡಾ. ಎಂ.ಎನ್. ಸುಮ, ಡಾ. ಪುರುಷೋತ್ತಮ ಶಾಸ್ತ್ರಿ ಮತ್ತು ಶ್ರೀ ಎಸ್.ಆರ್. ಸತೀಶ್‌ಚಂದ್ರ ಅವರಿದ್ದಾರೆ

## ಜೆಎಸ್‌ಎಸ್ ಕಾಲೇಜುಗಳಿಗೆ ಉತ್ತಮ ರ್‍ಯಾಂಕ್

ಮೈಸೂರಿನ ಬಿ.ಎನ್. ರಸ್ತೆಯಲ್ಲಿನ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು ಎಜ್ಯುಕೇಷನ್ ವರ್ಲ್ಡ್ ಸಂಸ್ಥೆಯು ಏಪ್ರಿಲ್ 2020ರಲ್ಲಿ ದೇಶದ ವಿಶ್ವವಿದ್ಯಾನಿಲಯಗಳು, ಕಾಲೇಜುಗಳು ಹಾಗೂ ಉನ್ನತ ಶಿಕ್ಷಣ ಸಂಸ್ಥೆಗಳ ಒಟ್ಟು 747 ಸ್ವಾಯತ್ತ ಕಾಲೇಜುಗಳ ಮೌಲ್ಯಮಾಪನದಲ್ಲಿ ಕಾಲೇಜು ರಾಜ್ಯಮಟ್ಟದಲ್ಲಿ 10ನೇ ರ್‍ಯಾಂಕ್ ಹಾಗೂ ರಾಷ್ಟ್ರಮಟ್ಟದಲ್ಲಿ 69ನೇ ರ್‍ಯಾಂಕ್ ಪಡೆದಿದೆ.

ಮೈಸೂರು ಸರಸ್ವತಿಪುರಂ ಜೆಎಸ್‌ಎಸ್ ಮಹಿಳಾ ಕಾಲೇಜು (ಸ್ವಾಯತ್ತ) ಮೈಸೂರು ವಿವಿ ವ್ಯಾಪ್ತಿಯಲ್ಲಿ ಕಳೆದ ನಾಲ್ಕು ವರ್ಷಗಳಿಂದಲೂ ಎ+ಗ್ರೇಡ್ ಪಡೆದಿರುವುದಲ್ಲದೆ 4 ಪಾಯಿಂಟ್ ಸ್ಕೇಲ್‌ನಲ್ಲಿ 3.51 ಸಿಜಿಪಿಎ ಗಳಿಸಿರುವ ಏಕೈಕ ಕಾಲೇಜು ಎಂಬ ಹಿರಿಮೆಗೆ ಪಾತ್ರವಾಗಿದೆ.

2023ರ ಮಾರ್ಚ್‌ವರೆವಿಗೂ ಗೋಲ್ಡ್ ಕಾಲೇಜು ರೇಟಿಂಗ್ ಮೌಲ್ಯ ಗಳಿಸಿರುವ ಕಾಲೇಜು, 2020ರ ಏಪ್ರಿಲ್ ಎಜುಕೇಷನ್ ವರ್ಲ್ಡ್ ಸರ್ವೆ ಪ್ರಕಾರ ರಾಜ್ಯದಲ್ಲಿ 3ನೇ ರ್‍ಯಾಂಕ್ ಹಾಗೂ ರಾಷ್ಟ್ರಮಟ್ಟದಲ್ಲಿ 26ನೇ ರ್‍ಯಾಂಕ್ ಗಳಿಸಿದೆ.

## ಸ್ತ್ರೀ ಸಮಾನತೆ ಎಂಬುದು ಕೇವಲ ದೈಹಿಕವಾದುದಲ್ಲ



ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ನಡೆದ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಶ್ರೀಮತಿ ಎಂ.ಪಿ. ಓಂಕಾರೇಶ್ವರಿಯವರು ಮಾತನಾಡುತ್ತಿರುವುದು. ಚಿತ್ರದಲ್ಲಿ ಡಾ. ಎಸ್.ಪಿ. ಉಮಾದೇವಿ ಮತ್ತು ಡಾ. ಕೆ.ವಿ. ಸುರೇಶರವರು

ಪುರಾಣ ಕಾಲದಿಂದಲೂ ಮಹಿಳೆ ಸಮಾನತೆಗಾಗಿ ಹೋರಾಟ ಮಾಡುತ್ತಾ ಬಂದಿದ್ದಾಳೆ. ಆದರೆ ಅಂದಿನ ಧಾರ್ಮಿಕ ನಂಬಿಕೆಗಳಿಂದ ಅದು ಸಾಧ್ಯವಾಗಲಿಲ್ಲ. 12ನೇ ಶತಮಾನದಲ್ಲಿ ಬಸವಣ್ಣನವರ ಹೋರಾಟದ ಮೂಲಕ ಸ್ತ್ರೀ ಸಮಾನತೆ ಲಭಿಸಿತು ಎಂದು ಬೆಂಗಳೂರು ಗ್ರಾಮಾಂತರ ಸಾರಿಗೆ ಇಲಾಖೆಯ ಜಂಟಿ ಆಯುಕ್ತರಾದ ಶ್ರೀಮತಿ ಎಂ.ಪಿ. ಓಂಕಾರೇಶ್ವರಿಯವರು ಹೇಳಿದರು.

ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ಕಾಲೇಜಿನ ಕನ್ನಡ ವಿಭಾಗವು ದಿನಾಂಕ 4.3.2020 ರಂದು ಆಯೋಜಿಸಿದ್ದ 'ಮಹಿಳಾ ಬದುಕು–ಸಮಕಾಲೀನ ಸವಾಲುಗಳು' ಎಂಬ ವಿಷಯ ಕುರಿತ ವಿಶೇಷ ಉಪನ್ಯಾಸ ನೀಡುತ್ತಾ ಸಮಾನತೆ ಎಂದರೆ ದೈಹಿಕವಾದುದಲ್ಲ, ಅದು ಸಮಾಜದಲ್ಲಿ ದೊರೆಯುವ ಸ್ಥಾನಮಾನ. ವಿದ್ಯಾರ್ಥಿನಿಯರು ಕಾಲೇಜಿನಲ್ಲಿ ದೊರೆಯುವ ಎಲ್ಲಾ ಸೌಲಭ್ಯಗಳನ್ನು ಬಳಸಿಕೊಂಡು ವಿದ್ಯಾರ್ಥಿ ಜೀವನವನ್ನು ಸಾರ್ಥಕಗೊಳಿಸಿಕೊಳ್ಳಬೇಕು, ಒಳ್ಳೆಯ ವಿಷಯಗಳಿಗೆ ಆದ್ಯತೆ ಕೊಡಬೇಕು. ಇಂದು ಜಗತ್ತಿನಲ್ಲಿ ಸ್ಪರ್ಧೆ ಜಾಸ್ತಿ ಇದೆ. ಆದ್ದರಿಂದ ನೀವು ಧನಾತ್ಮಕ ಚಿಂತನೆಯನ್ನು ಹಾಗೂ ಉನ್ನತ ಮೌಲ್ಯಗಳನ್ನು ಬೆಳೆಸಿಕೊಂಡು ಬದುಕನ್ನು ಕಟ್ಟಿಕೊಳ್ಳಬೇಕು. ಪ್ರತಿಷ್ಠೆ ಮುಖ್ಯವಲ್ಲ, ನಮ್ಮ ವ್ಯಕ್ತಿತ್ವ ಬಹಳ ಮುಖ್ಯವಾದುದು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಪ್ರಾಂಶುಪಾಲರಾದ ಡಾ.ಕೆ.ವಿ. ಸುರೇಶ, ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ. ಎಸ್.ಪಿ. ಉಮಾದೇವಿ, ಶೈಕ್ಷಣಿಕ ಡೀನ್‌ರಾದ ಡಾ. ಎಚ್.ಬಿ. ಸುರೇಶ್‌ರವರು ಉಪಸ್ಥಿತರಿದ್ದರು.

## ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳಲ್ಲಿ ಆನ್‌ಲೈನ್ ಶಿಕ್ಷಣ

ಕೋವಿಡ್–19 ಹೆಸರಿನ ವೈರಾಣುವಿನ ಸೋಂಕು ಹರಡುವಿಕೆಯನ್ನು ನಿಯಂತ್ರಿಸಲು ಸರ್ಕಾರಗಳು ಲಾಕ್‌ಡೌನ್ ಜಾರಿಗೊಳಿಸಿದವು. ಇತರೆ ಕ್ಷೇತ್ರದಲ್ಲಿ ಉಂಟಾದಂತೆ ಶಿಕ್ಷಣ ಕ್ಷೇತ್ರದ ಮೇಲೂ ಅದರ ಪರಿಣಾಮ ಉಂಟಾಯಿತು. ಅದನ್ನು ಸಮರ್ಥವಾಗಿ ನಿರ್ವಹಿಸಲು ಜೆಎಸ್‌ಎಸ್ ಸಂಸ್ಥೆಗಳ ಶಾಲಾಕಾಲೇಜುಗಳಲ್ಲಿ ಆನ್‌ಲೈನ್ ಶಿಕ್ಷಣ ವಿಧಾನವನ್ನು ಅನುಸರಿಸಲಾಯಿತು.

ಮೈಸೂರಿನ ಬಿ.ಎನ್. ರಸ್ತೆಯ ಜೆಎಸ್‌ಎಸ್ ಕಾಲೇಜು, ಎಸ್‌ಜೆಸಿಇ, ಜೆಎಸ್‌ಎಸ್ ಮೆಡಿಕಲ್ ಕಾಲೇಜು, ಸರಸ್ವತಿಪುರಂ ಜೆಎಸ್‌ಎಸ್ ಮಹಿಳಾ ಕಾಲೇಜು, ಚಾ.ನಗರ ಜೆಎಸ್‌ಎಸ್ ಕಾಲೇಜು, ಗುಂಡ್ಲುಪೇಟೆಯ ಜೆಎಸ್‌ಎಸ್ ಕಾಲೇಜು, ಸೇರಿದಂತೆ ಸಂಸ್ಥೆಯ ಪಬ್ಲಿಕ್ ಶಾಲೆಗಳಲ್ಲೂ ಆನ್‌ಲೈನ್ ತರಗತಿಗಳನ್ನು ನಡೆಸಲಾಗುತ್ತಿದೆ.

## ನಂಜನಗೂಡು ಜೆಎಸ್‌ಎಸ್ ಕಾಲೇಜಿನಲ್ಲಿ ವಿಶೇಷ ಉಪನ್ಯಾಸಗಳು

ನಂಜನಗೂಡಿನ ಜೆಎಸ್‌ಎಸ್ ಕಾಲೇಜಿನಲ್ಲಿ 5.2.2020ರಂದು ಭೂಗೋಳಶಾಸ್ತ್ರ ವಿಭಾಗದ ವತಿಯಿಂದ "ಅನ್ವಯಿತ ಜಿಐಎಸ್‌ನ ಅವಕಾಶಗಳು" ಎಂಬ ವಿಷಯ ಕುರಿತು ಉಪನ್ಯಾಸವನ್ನು ಏರ್ಪಡಿಸಲಾಗಿತ್ತು. ಜೆಎಸ್‌ಎಸ್ ಎಹೆಚ್ಇಆರ್‌ನ ಸಹಾಯಕ ಪ್ರಾಧ್ಯಾಪಕರಾದ ಡಾ. ರವಿಕುಮಾರ್‌ರವರು ಭೌಗೋಳಿಕ ಮಾಹಿತಿ ವ್ಯವಸ್ಥೆಯ ಸ್ಥಾನೀಕರಣ, ಭೂಭಾಗಗಳ ಲಕ್ಷಣಗಳ ಬದಲಾವಣೆ, ರಾಸ್ಟರ್ ಮತ್ತು ವೆಕ್ಟರ್ ದತ್ತಾಂಶಗಳ ಅಳವಡಿಕೆ, ಭೂಪಟ ರಚನೆ, ಅಪಘಾತ ವಲಯಗಳ ಅಧ್ಯಯನ ಮಾಡಿದವರಿಗೆ ಸಾಕಷ್ಟು ವಿಭಾಗಗಳಲ್ಲಿ ಉದ್ಯೋಗವಕಾಶಗಳಿರುವ ಬಗ್ಗೆ ಮಾಹಿತಿ ನೀಡಿದರು.

***

15.2.2020 ರಂದು ಮೈಸೂರಿನ ಇನ್ಫೋಸಿಸ್‌ನ ಸೇವಾ ಕೇಂದ್ರಕ್ಕೆ ಮಾಹಿತಿ ಪಡೆಯಲು ಬಿ.ಕಾಂ. ವಿದ್ಯಾರ್ಥಿಗಳು ಭೇಟಿ ನೀಡಿದರು. ಪ್ರಥಮ, ದ್ವಿತೀಯ, ತೃತೀಯ ಬಿ.ಕಾಂ.ನ 60 ವಿದ್ಯಾರ್ಥಿಗಳು ಇದರಲ್ಲಿ ಪಾಲ್ಗೊಂಡು ಸೇವಾ ತಂತ್ರಜ್ಞಾನದ ಬಗ್ಗೆ ಮಾಹಿತಿ ಪಡೆದರು. ವಿದ್ಯಾರ್ಥಿಗಳಿಗೆ ಮಾರ್ಗದರ್ಶಕರಾಗಿ ಅಧ್ಯಾಪಕಿಯರಾದ ಶ್ರೀಮತಿ ಸುರೇಖ ಸುಭಾಷ್ ಪಾಟೀಲ್ ಮತ್ತು ಕು. ಜಿ. ಶ್ವೇತಾರವರು ಭಾಗವಹಿಸಿದ್ದರು.

***

19.2.2020 ರಂದು ರಾಜ್ಯಶಾಸ್ತ್ರ ವಿಭಾಗದ ವತಿಯಿಂದ ಕಲಾ ವಿಭಾಗದ ವಿದ್ಯಾರ್ಥಿಗಳಿಗಾಗಿ 'ಕಾನೂನಿನ ಅರಿವು' ಕಾರ್ಯಕ್ರಮದ ಅಡಿಯಲ್ಲಿ ಮೈಸೂರು ಜಿಲ್ಲಾ ನ್ಯಾಯಾಲಯದ ಕಾರ್ಯ ಕಲಾಪವನ್ನು ವೀಕ್ಷಿಸಲು ವ್ಯವಸ್ಥೆ ಮಾಡಲಾಗಿತ್ತು. ಅಧ್ಯಾಪಕಿಯರಾದ ಶ್ರೀಮತಿ ರೂಪ ಮತ್ತು ಡಾ. ಪಂಕಜರವರು ಪಾಲ್ಗೊಂಡಿದ್ದರು. ನ್ಯಾಯಾಲಯದ ಕಲಾಪವನ್ನು ಪ್ರತ್ಯಕ್ಷವಾಗಿ ನೋಡುವುದು, ಕಾನೂನಿನ ಉಲ್ಲಂಘನೆಗೆ ನೀಡುವ ಶಿಕ್ಷೆ, ವಕೀಲರ ವಾದ ವಿವಾದ ಗಳು, ನ್ಯಾಯಾಧೀಶರ ನ್ಯಾಯ ತೀರ್ಮಾನ ಇವುಗಳ ಅನುಭವವನ್ನು ವಿದ್ಯಾರ್ಥಿಗಳು ಪಡೆದುಕೊಂಡರು.

***

19.2.2020 ರಂದು ಗಣಿತ ಮತ್ತು ಗಣಕ ವಿಜ್ಞಾನದ ಸಂಯೋಗದೊಂದಿಗೆ ಅಂತಿಮ ಬಿಎಸ್ಸಿ ವಿದ್ಯಾರ್ಥಿ ಗಳಿಗಾಗಿ 'ಪೈಥಾನ್ ಪ್ರೋಗ್ರಾಮಿಂಗ್' ಎಂಬ ವಿಷಯ ಕುರಿತು ಒಂದು ದಿನದ ಕಾರ್ಯಾಗಾರವನ್ನು ಏರ್ಪಡಿಸಲಾಗಿತ್ತು.

ಮೈಸೂರಿನ ಸುರಭಿ ಸಾಫ್ಟ್‌ವೇರ್ ಕಂಪನಿ ಮಾಲೀಕರಾದ ಶ್ರೀಮತಿ ಅರುಣಾದೇವಿಯವರು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡುತ್ತಾ ಕಾರ್ಪೊರೇಟ್ ಕ್ಷೇತ್ರದಲ್ಲಿ 'ಪೈಥಾನ್ ಪ್ರೋಗ್ರಾಮಿಂಗ್'ನ ಪ್ರಾಮುಖ್ಯತೆ ಮತ್ತು ಮಹತ್ವವನ್ನು ತಿಳಿಸಿದರು.

ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾಲೇಜು ವಿಭಾಗದ ಸಹಾಯಕ ನಿರ್ದೇಶಕರಾದ ಶ್ರೀ ಬಿ. ನಿರಂಜನಮೂರ್ತಿಯವರು ಎಲ್ಲಾ ಕ್ಷೇತ್ರಗಳಲ್ಲೂ ಹೊಸ ಹೊಸ ಆವಿಷ್ಕಾರ ಸೃಷ್ಟಿಯಾಗಬೇಕು. ತಂತ್ರಜ್ಞಾನವನ್ನು ಎಲ್ಲಿ ಹೇಗೆ ಬಳಸಬೇಕು ಎಂಬ ಅರಿವು ಇಲ್ಲದಿದ್ದರೆ ಅದೇ ನಮಗೆ ಮಾರಕವಾಗುತ್ತದೆ. ಇದರ ಅರಿವು ಪಡೆಯಲು ಇಂತಹ ಕಾರ್ಯಾಗಾರಗಳು ವಿದ್ಯಾರ್ಥಿ ಗಳಿಗೆ ಪ್ರಯೋಜನಕಾರಿಯಾಗುತ್ತವೆ ಎಂದು ತಿಳಿಸಿದರು.

ವಿಭಾಗಗಳ ಪ್ರಯೋಗಾಲಯಗಳಲ್ಲಿ ಸಂಪನ್ಮೂಲ ವ್ಯಕ್ತಿಗಳಿಂದ ಪ್ರಾಯೋಗಿಕವಾಗಿ ಪೈಥಾನ್ ಪ್ರೋಗ್ರಾಮಿಂಗ್ ಬಗ್ಗೆ ತರಬೇತಿ ನೀಡಲಾಯಿತು.

ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಹೆಚ್. ಎಸ್. ನಾಗೇಂದ್ರಕುಮಾರ್, ಸಂಪನ್ಮೂಲ ವ್ಯಕ್ತಿಗಳಾದ ಡಾ. ಪಿ. ಎಸ್. ಗುರುಪ್ರಸಾದ್ ಮತ್ತು ಗಣಿತಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಶ್ರೀಮತಿ ಬಿ. ದಾಕ್ಷಾಯಿಣಿ ಉಪಸ್ಥಿತರಿದ್ದರು.

***

25.2.2020 ರಂದು ಕಾಲೇಜಿನ ಅಧ್ಯಾಪಕರಿಗಾಗಿ ಐಕ್ಯೂಎಸಿ ಘಟಕದಿಂದ ವಿಶೇಷ ಉಪನ್ಯಾಸವನ್ನು ಏರ್ಪಡಿಸಲಾಗಿತ್ತು. 'ಮುಕ್ತ ಶೈಕ್ಷಣಿಕ ಸಂಪನ್ಮೂಲಗಳು ಮತ್ತು ಬೃಹತ್ ಮುಕ್ತ ಆನ್‌ಲೈನ್ ಕೋರ್ಸ್‌ಗಳು" ಎಂಬ ವಿಷಯ ಕುರಿತು ಡಾ. ಹೆಚ್.ಎಸ್. ಕುಮಾರ್‌ರವರು ಮಾತನಾಡಿದರು. ಕಾರ್ಯಕ್ರಮದ

ಅಧ್ಯಕ್ಷತೆಯನ್ನು ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಶ್ರೀಮತಿ ಪಿ. ನಿರ್ಮಲರವರು ವಹಿಸಿದ್ದರು

***

26.2.2020 ರಂದು ದತ್ತಿ ಉಪನ್ಯಾಸ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಕೆ.ಆರ್. ನಗರದ ಸರ್ಕಾರಿ ಪದವಿ ಕಾಲೇಜಿನ ಸ್ನಾತಕೋತ್ತರ ಕೇಂದ್ರದ ಸಹಾಯಕ ಪ್ರಾಧ್ಯಾಪಕರಾದ ಡಾ. ಸತೀಶ್‌ಚಂದ್ರರವರು 'ಏಕಲವ್ಯ ಮತ್ತು ಸಾಕ್ರಟಿಸ್‌ರ ತತ್ವ ಇಂದಿನ ಬದುಕಿಗೆ ಪೂರಕ' ಎಂಬ ವಿಷಯದ ಬಗ್ಗೆ ವಿಶೇಷ ಉಪನ್ಯಾಸ ನೀಡಿದರು. ಡಾ. ಸಿದ್ಧಲಿಂಗಯ್ಯನವರ ಏಕಲವ್ಯ ನಾಟಕ ಮತ್ತು ಆರ್.ಡಿ. ಕಾಮತ್‌ರ ಸಾಕ್ರಟಿಸ್ ನಾಟಕಗಳ ತೌಲನಿಕ ಚರ್ಚೆ ಮಾಡುತ್ತಾ ಪುರಾಣದ ವ್ಯಕ್ತಿಗಳನ್ನು ಅಂತೆಯೇ ಸಮಾಜದ ಹೆಸರಾಂತ ವ್ಯಕ್ತಿಗಳನ್ನು ಸಾಹಿತ್ಯದ ಮೂಲಕ ಪುನರ್‌ಮನನ ಮಾಡಿಕೊಳ್ಳುವ ಕೆಲಸ ನಡೆಯುತ್ತಿದೆ. ಇದರಲ್ಲಿ ಏಕಲವ್ಯ ನಾಟಕವೂ ಒಂದು ಎಂದು ನುಡಿದರು.

ಸಾಕ್ರಟಿಸ್ ನಾಟಕದ ಬಗ್ಗೆ ಮಾತನಾಡುತ್ತಾ ಈತನೊಬ್ಬ ತತ್ತ್ವಜ್ಞಾನಿ, ಸತ್ಯಶೋಧಕನೂ ಹೌದು. ಬದುಕಿದ್ದು ಸತ್ತಂತಿರುವ ಬದಲು ಸತ್ತು ಬದುಕಬೇಕು ಎನ್ನುವ ತತ್ತ್ವ ಸಾಕ್ರಟಿಸನದು. ಅವನ ಬದುಕಿನುದ್ದಕ್ಕೂ ಸಾರಿದ ನೀತಿ, ತತ್ತ್ವಗಳು ಅವನಿಗೆ ಮುಳುವಾಯಿತು. ಸಾವನ್ನು ಧೈರ್ಯವಾಗಿ ಎದುರಿಸಬೇಕು. ಸ್ವತಂತ್ರವಾಗಿ ಆಲೋಚಿಸಿ, ಆಗ ನಿಮಗೆ ಸತ್ಯದ ಅರಿವು ಸಾಧ್ಯ ಎನ್ನುವ ಅವನ ತತ್ತ್ವ ಮಹತ್ವದ್ದು. ವಿಷ ಕುಡಿದರೂ ಹೇಗೆ ಸಾಕ್ರಟಿಸ್ ಕ್ರಿಯಾಶೀಲನಾಗಿರುತ್ತಾನೋ ಹಾಗೆ ನಾವು ಏನೇ ಸಂಕಷ್ಟಗಳು ಬಂದರೂ ಎದುರಿಸಬೇಕು. ಇದಕ್ಕೆ ಸಾಕ್ರಟೀಸನ ಬದುಕು ಒಂದು ಆದರ್ಶ ಎಂದು ಅಭಿಪ್ರಾಯಪಟ್ಟರು.

ಕನ್ನಡ ವಿಭಾಗದ ಮುಖ್ಯಸ್ಥರಾದ ಶ್ರೀಮತಿ ನಿರ್ಮಲಾದೇವಿಯವರು ದತ್ತಿ ಉಪನ್ಯಾಸ ಹೇಗೆ ಹುಟ್ಟಿ ಬೆಳೆದು ಇಂದು ವೃಕ್ಷವಾಗಿ ಸಾಹಿತ್ಯ ಪ್ರಸರಣ ಮಾಡುತ್ತಿದೆ ಎನ್ನುವುದನ್ನು ವಿವರಿಸುತ್ತಾ ಇದಕ್ಕೆ ಮೂಲ ಕರ್ತೃಗಳಾದ ಪ್ರೊ. ಮ.ಗಂ. ರೇಣುಕಪ್ರಸನ್ನ ಮತ್ತು ಪ್ರೊ. ಬಿ. ಸೋಮಶೇಖರಪ್ಪರವರನ್ನು ಸ್ಮರಿಸಿದರು.

ಕಾರ್ಯಕ್ರಮದಲ್ಲಿ ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಶ್ರೀಮತಿ. ಪಿ. ನಿರ್ಮಲ ಮತ್ತು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

***

27.2.2020 ರಂದು ಮೈಸೂರಿನ ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ಸಹಯೋಗದೊಂದಿಗೆ ಕಾಲೇಜಿನ ಇತಿಹಾಸ ವಿಭಾಗದ ವತಿಯಿಂದ ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ್ದ ಮೈಸೂರಿನ ಮಹಾರಾಜ ಕಾಲೇಜಿನ ಇತಿಹಾಸ ವಿಭಾಗದ ಸಹ ಪ್ರಾಧ್ಯಾಪಕರಾದ ಡಾ. ಆರ್.ಡಿ. ಪವಮಾನ ಅವರು ವಿಜಯನಗರ ಕಾಲದ ಸಾಹಿತ್ಯಕ ಕೊಡುಗೆಗಳು ಎಂಬ ವಿಷಯದ ಬಗ್ಗೆ ವಿವರಣೆ ನೀಡಿದರು. ಹೊಯ್ಸಳರ ಕಾಲದ ಸಾಂಸ್ಕೃತಿಕ ಕೊಡುಗೆಗಳು ಎಂಬ ವಿಷಯದ ಬಗ್ಗೆ ನಿವೃತ್ತ ಪ್ರಾಧ್ಯಾಪಕರಾದ ಡಾ. ಉಷಾರಾಣಿ ಉಪನ್ಯಾಸ ನೀಡಿದರು. ಟಿ. ನರಸೀಪುರದ ಪಿ.ಆರ್.ಎಂ. ಕಾಲೇಜಿನ ಸಹ ಪ್ರಾಧ್ಯಾಪಕರಾದ ಡಾ. ಲ.ನ. ಸ್ವಾಮಿಯವರು ಶ್ರೀ ಜಯಚಾಮರಾಜೇಂದ್ರ ಒಡೆಯರ್‌ರವರ ಜೀವನ ಮತ್ತು ಸಾಧನೆ ವಿಷಯದ ಬಗ್ಗೆ ಉಪನ್ಯಾಸ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪರಂಪರೆ ಇಲಾಖೆಯ ನಿವೃತ್ತ ಉಪನಿರ್ದೇಶಕರಾದ ಶ್ರೀಮತಿ ನಿರ್ಮಲಾ ಮಠಪತಿಯವರು ವಹಿಸಿದ್ದರು. ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಶ್ರೀಮತಿ ಪಿ. ನಿರ್ಮಲರವರು ವೇದಿಕೆಯಲ್ಲಿ ಉಪಸ್ಥಿತರಿದ್ದರು. ಚಿ. ಧನುಷ್ ಪ್ರಾರ್ಥಿಸಿದರು. ವಿಭಾಗದ ಮುಖ್ಯಸ್ಥರಾದ ಡಾ. ಪಿ. ಮಹದೇವಮ್ಮ ಸ್ವಾಗತಿಸಿದರು. ಶ್ರೀ ಸ್ವಾಮಿ ಕಾರ್ಯಕ್ರಮ ನಿರೂಪಿಸಿದರು. ಕು. ಚಂದನ ವಂದಿಸಿದರು.

## ದೇವಾಲಯಗಳಿಗೆ ಭೇಟಿ

ಕಾಲೇಜಿನ ಇತಿಹಾಸ ವಿಭಾಗದ ವತಿಯಿಂದ 14.02.2020 ರಂದು ಕಲಾ ವಿಭಾಗದ ವಿದ್ಯಾರ್ಥಿಗಳೊಂದಿಗೆ ಕ್ಷೇತ್ರ ವೀಕ್ಷಣೆಗಾಗಿ ನಂಜನಗೂಡಿನ ಪ್ರಮುಖ ದೇವಾಲಯಗಳಿಗೆ ಭೇಟಿ ನೀಡಲಾಯಿತು.

## ಹೊಸ ಹೊಸ ಆವಿಷ್ಕಾರಗಳಿಗೆ ವಿಜ್ಞಾನ ಅವಕಾಶ ಮಾಡಿಕೊಟ್ಟಿದೆ




ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವರಾದ ಪ್ರೊ. ಕೆ.ಎಂ. ಮಹದೇವನ್‌ರವರು ವಿಚಾರ ಸಂಕಿರಣವನ್ನು ಉದ್ಘಾಟಿಸುತ್ತಿರುವುದು. ಚಿತ್ರದಲ್ಲಿ ಪ್ರೊ. ಎಂ. ಮಹದೇವಪ್ಪ, ಪ್ರೊ. ಬಿ.ವಿ. ಸಾಂಬಶಿವಯ್ಯ, ಡಾ. ಎಸ್. ಶ್ರೀಕಂಠಸ್ವಾಮಿ, ಡಾ. ಎಲ್. ಮಲ್ಲೇಶ ಮತ್ತು ಡಾ. ಸಿ. ಮಲ್ಲಿಕಾರ್ಜುನಸ್ವಾಮಿ ಅವರುಗಳು

ಸಮಾಜದ ಐತಿಹಾಸಿಕ ಬೆಳವಣಿಗೆಯನ್ನು ಮತ್ತು ಅದರಲ್ಲಿ ವಿಜ್ಞಾನದ ಮಹತ್ವವನ್ನು ಅವಲೋಕಿಸಿದಾಗ ಅವುಗಳಲ್ಲಿ ಹಲವು ಸಂದರ್ಭಗಳಲ್ಲಿ ವಿಸ್ಮಯದ ಕ್ರಿಯೆಗಳು ನಡೆದಿರುವುದು ನಮಗೆ ಗೋಚರವಾಗುತ್ತದೆ ಎಂದು ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವರಾದ ಪ್ರೊ. ಕೆ. ಎಮ್. ಮಹದೇವನ್‌ರವರು ತಿಳಿಸಿದರು.

ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ದಿನಾಂಕ 7.3.2020 ರಂದು ರಸಾಯನಶಾಸ್ತ್ರ ವಿಭಾಗದಿಂದ ಆಯೋಜಿಸಿದ್ದ 'ನ್ಯೂ ಇನೋವೇಷನ್ಸ್ ಇನ್ ಅಡ್ವಾನ್ಸ್ಡ್ ಮೆಟಿರಿಯಲ್ಸ್' ಎಂಬ ವಿಷಯ ಕುರಿತ ಯುಜಿಸಿ ಪ್ರಾಯೋಜಿತ ರಾಜ್ಯಮಟ್ಟದ ಒಂದು ದಿನದ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಅವರು ಮಾತನಾಡಿದರು. ವಿಜ್ಞಾನದಲ್ಲಿ ಪ್ರೋಟಾನ್, ನ್ಯೂಟ್ರಾನ್ ಮತ್ತು ಎಲೆಕ್ಟ್ರಾನ್ ಗಳನ್ನು ಕ್ರಮವಾಗಿ ಬ್ರಹ್ಮ, ವಿಷ್ಣು ಮತ್ತು ಮಹೇಶ್ವರರಿಗೆ ಹೋಲಿಸಲಾಗುತ್ತದೆ. ನಮ್ಮ ವಿಜ್ಞಾನ, ಸಮಾಜ ಮತ್ತು ಸಂಸ್ಕೃತಿಯಲ್ಲಿ ವೈಶಿಷ್ಟ್ಯಗಳಿವೆ. ಬ್ರಹ್ಮಾಂಡದ ಸೃಷ್ಟಿಯಲ್ಲಿನ ಭಾರತೀಯರ ಕಲ್ಪನೆ ವಿಶಿಷ್ಟವಾದುದು. ಭೌತಶಾಸ್ತ್ರ, ರಸಾಯನಶಾಸ್ತ್ರ, ಜೀವಶಾಸ್ತ್ರ ಮುಂತಾದ ವಿವಿಧ ವಿಷಯಗಳಲ್ಲಿ ಅನೇಕ ರೀತಿಯ ಆವಿಷ್ಕಾರಗಳಿಗೆ ವಿಜ್ಞಾನ ಅವಕಾಶ ಮಾಡಿಕೊಟ್ಟಿದೆ. ವಿಜ್ಞಾನದಲ್ಲಿ ಸಂಶೋಧಕರು ಪ್ರಸ್ತುತ ಲಭ್ಯವಿರುವ ಸಂಪನ್ಮೂಲಗಳನ್ನು ಸಮರ್ಪಕವಾಗಿ ಬಳಸಿಕೊಂಡು ಹೊಸ ಆವಿಷ್ಕಾರಗಳಿಗೆ ತೆರೆದುಕೊಳ್ಳ ಬೇಕೆಂದು ಆಶಿಸಿದರು.

ಮುಖ್ಯ ಅತಿಥಿಗಳಾಗಿದ್ದ ಮೈಸೂರು ವಿಶ್ವವಿದ್ಯಾನಿಲಯದ ಕಾಲೇಜು ಅಭಿವೃದ್ಧಿ ಮಂಡಳಿಯ ನಿರ್ದೇಶಕರಾದ ಡಾ. ಎಸ್. ಶ್ರೀಕಂಠಸ್ವಾಮಿ ಅವರು ಶತಮಾನಗಳಿಂದ ಹಲವಾರು ಉದ್ದೇಶಗಳಿಗಾಗಿ ಬಳಸುವ ವಸ್ತುಗಳು ವಿಜ್ಞಾನ ಆಧಾರಿತವಾಗಿವೆ. ಮಾನವ ಜನಾಂಗದ ಅಭಿವೃದ್ಧಿಯಲ್ಲಿ ಪದಾರ್ಥ ವಿಜ್ಞಾನ ಕ್ಷೇತ್ರವು ಹೊಸ ಕೊಡುಗೆಗಳಿಂದ ಪ್ರಾಬಲ್ಯ ಸಾಧಿಸಿಕೊಂಡು ಬಂದಿದೆ ಎಂದು ಹೇಳಿದರು.

ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕರಾದ ಪ್ರೊ. ಬಿ.ವಿ. ಸಾಂಬಶಿವಯ್ಯನವರು ಇಂದಿನ ವರ್ತಮಾನದ ಬದುಕಿಗೆ ವಿಭಿನ್ನ ವಸ್ತುಗಳ ಅನ್ವಯ ಮಹತ್ವದ್ದಾಗಿದೆ. ಬಹಳ ಹಿಂದೆಯೇ ವಿಜ್ಞಾನಿಗಳು ಹೇಳಿದಂತೆ ಪ್ರಸ್ತುತ ದಿನಗಳಲ್ಲಿ ಪದಾರ್ಥ ವಿಜ್ಞಾನ ಪ್ರಧಾನ ಪಾತ್ರ ವಹಿಸಿದೆ. ವೈಜ್ಞಾನಿಕ ಕ್ಷೇತ್ರಗಳಲ್ಲಿ ಆಗಿರುವ ಹೊಸ ಸಾಧನೆ ಮತ್ತು ಆವಿಷ್ಕಾರಗಳು ಸಮಾಜದ ಸರ್ವಾಂಗೀಣ ಅಭಿವೃದ್ಧಿಗೆ ಸಹಕಾರಿಯಾಗಿವೆ. ಮತ್ತು ಉತ್ತಮ ಭವಿಷ್ಯಕ್ಕೆ ಹೊಸ ವಸ್ತುಗಳು ಅಗತ್ಯವಾಗಿವೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಪ್ರಾಂಶುಪಾಲರಾದ ಪ್ರೊ. ಎಂ. ಮಹದೇವಪ್ಪ, ಸ್ನಾತಕೋತ್ತರ ರಸಾಯನಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ. ಎಲ್. ಮಲ್ಲೇಶ, ವಿಚಾರ ಸಂಕಿರಣದ ಸಂಘಟನಾ ಕಾರ್ಯದರ್ಶಿಗಳಾದ ಡಾ. ಸಿ. ಮಲ್ಲಿಕಾರ್ಜುನಸ್ವಾಮಿ ಮತ್ತು ಶ್ರೀ ಮಂಜುನಾಥ್‌ರವರು ಉಪಸ್ಥಿತರಿದ್ದರು.

□

## ಶ್ರೀ ಸುತ್ತೂರು ಮಠದಿಂದ ಅನ್ನದಾಸೋಹ

ರಾಜ್ಯದಲ್ಲಿ ಕೊರೋನಾ ವೈರಾಣುವಿನಿಂದ ಜನರ ಜೀವನ ಅಸ್ತವ್ಯಸ್ತಗೊಂಡ ಸಂದರ್ಭದಲ್ಲಿ ಕಾರ್ಮಿಕರು, ದಿನಗೂಲಿ ನೌಕರರು ಸೇರಿದಂತೆ ಇತರರಿಗೆ ಊಟೋಪಚಾರದ ತೊಂದರೆಯಾಗಿತ್ತು. ಈ ಹಿನ್ನೆಲೆಯಲ್ಲಿ ಶ್ರೀ ಸುತ್ತೂರು ಮಠದ ವತಿಯಿಂದ ಅನ್ನದಾಸೋಹದ ವ್ಯವಸ್ಥೆ ಮಾಡಲಾಗಿತ್ತು. ಜಿಲ್ಲಾಡಳಿತದ ಸೂಚನೆಯ ಮೇರೆಗೆ ಪ್ರತಿನಿತ್ಯ ನಗರದ ಹೆಬ್ಬಾಳು, ಮೇಟಗಳ್ಳಿ, ಕುಂಬಾರಕೊಪ್ಪಲು ಸುತ್ತಮುತ್ತಲ ಪ್ರದೇಶಗಳಲ್ಲಿ ದಾಸೋಹದ ವ್ಯವಸ್ಥೆ ಮಾಡಲಾಗಿತ್ತು.

## ಸುತ್ತೂರು ಶ್ರೀಕ್ಷೇತ್ರದಲ್ಲಿ ಮಂಡಲಪೂಜೆ

ಸುತ್ತೂರು ಶ್ರೀ ಕ್ಷೇತ್ರದ ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಕರ್ತೃಗದ್ದುಗೆ ಆವರಣದಲ್ಲಿ ಶ್ರೀ ನಂಜುಂಡೇಶ್ವರ ದೇವಸ್ಥಾನದ ಪುನರ್ ಪ್ರತಿಷ್ಠಾಪನೆ ಮಂಡಲಪೂಜೆಯನ್ನು ದಿನಾಂಕ 9.3.2020ರಂದು ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯಸಾನ್ನಿಧ್ಯದಲ್ಲಿ ನೆರವೇರಿಸಲಾಯಿತು.

ಮುಂಜಾನೆ ಕಪಿಲಾ ತೀರದಲ್ಲಿ ಗಂಗಾಪೂಜೆ ನೆರವೇರಿಸಿ 108 ಕುಂಭಗಳಲ್ಲಿ ಅಗ್ರೋದಕವನ್ನು ಮಂಗಳವಾದ್ಯ ಸಮೇತ ವೀರಗಾಸೆಯೊಡನೆ ಶ್ರೀಗದ್ದುಗೆಗೆ ತರಲಾಯಿತು. ನಂತರ ಗಣಪತಿ ಪೂಜೆ, ಸ್ವಸ್ತಿವಾಚನ, ನಾಂದಿ, ಏಕಾದಶ ರುದ್ರಕಲಶಾರಾಧನೆ, ಏಕಾದಶವಾರ ರುದ್ರಾಭಿಷೇಕವನ್ನು ನೆರವೇರಿಸಲಾಯಿತು. ಮಹಾ ಮಂಗಳಾರತಿಯ ನಂತರ ಪ್ರಸಾದ ವಿತರಿಸಲಾಯಿತು. ಮಠಾಧೀಶರುಗಳು, ಸಾರ್ವಜನಿಕರು ಹಾಗೂ ಭಕ್ತಾದಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

***

## ಬ್ಯಾಡ್ಮಿಂಟನ್‌ನಲ್ಲಿ ಪ್ರಥಮ

ಕೆ. ಎಂ. ದೊಡ್ಡಿಯ ಭಾರತೀ ಕಾಲೇಜಿನಲ್ಲಿ ನಡೆದ ಅಂತರ ಕಾಲೇಜು ಮತ್ತು ಅಂತರ ವಲಯ ಕ್ರೀಡಾ ಸ್ಪರ್ಧೆಯ ಬ್ಯಾಡ್ಮಿಂಟನ್ ಪಂದ್ಯದಲ್ಲಿ ನಂಜನಗೂಡಿನ ಜೆಎಸ್‌ಎಸ್ ಕಾಲೇಜಿನ ವಿದ್ಯಾರ್ಥಿಗಳಾದ ಕು. ಚಿನ್ಮಯಿ ಮತ್ತು ಕು. ನಿಶಾರವರು ಪ್ರಥಮ ಸ್ಥಾನ ಪಡೆದಿರುತ್ತಾರೆ.

***

## ಥ್ರೋಬಾಲ್ ಪಂದ್ಯದಲ್ಲಿ ತೃತೀಯ

ಮೈಸೂರು ವಿಶ್ವವಿದ್ಯಾನಿಲಯದ ದೈಹಿಕ ಶಿಕ್ಷಣ ವಿಭಾಗವು ಏರ್ಪಡಿಸಿದ್ದ ಪುರುಷರ ಅಂತರ ವಲಯ ಅಂತರಕಾಲೇಜು ಥ್ರೋಬಾಲ್ ಪಂದ್ಯದಲ್ಲಿ ಕು. ನಂದನ್ ಕೆ. ಮತ್ತು ತಂಡದವರು ಭಾಗವಹಿಸಿ ತೃತೀಯ ಸ್ಥಾನ ಪಡೆದಿರುತ್ತಾರೆ.

***

## ಶ್ರೀ ಸುಭಾಷ್ ಪ್ಯಾಟಿಗೆ ಇನ್ನೋವೇಟಿವ್ ಟೀಚಿಂಗ್ ಪ್ರಶಸ್ತಿ

ವಿಜಯ ಕರ್ನಾಟಕ ಮತ್ತು ಟೈಮ್ಸ್ ಫೌಂಡೇಷನ್ ವತಿಯಿಂದ ನೀಡುವ ಟಾಫಿಟ್ 2019–20ನೇ ಸಾಲಿನ ಟೀಚರ್ಸ್ ಅವಾರ್ಡ್ಸ್ ಇನ್ನೋವೇಟಿವ್ ಟೀಚಿಂಗ್ ಪ್ರಶಸ್ತಿಗೆ ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಸಹನಾ ಶಾಲೆಯ ಶಿಕ್ಷಕರಾದ ಶ್ರೀ ಸುಭಾಷ್ ಪ್ಯಾಟಿಯವರು ಭಾಜನರಾಗಿದ್ದಾರೆ.

***

## ನ್ಯಾಷನಲ್ ಮೀನ್ಸ್–ಕಮ್–ಮೆರಿಟ್ ಪರೀಕ್ಷೆಯಲ್ಲಿ ಉತ್ತೀರ್ಣ

ನ್ಯಾಷನಲ್ ಮೀನ್ಸ್–ಕಮ್–ಮೆರಿಟ್ ವಿದ್ಯಾರ್ಥಿ ವೇತನ ಪರೀಕ್ಷೆಯಲ್ಲಿ ಮೈಸೂರಿನ ಲಕ್ಷ್ಮೀಪುರಂ ಜೆಎಸ್‌ಎಸ್ ಪ್ರೌಢಶಾಲೆಯ ವಿದ್ಯಾರ್ಥಿಗಳಾದ ಕು. ಭರತ್ ಪ್ರಸಾದ್, ಕು. ಎಲ್.ಎಂ. ದರ್ಶನ್ ಕುಮಾರ್, ಕು. ಎಸ್. ಮನೋಜ್, ಕು. ಎಸ್. ರಾಘವ್, ಕು. ಆರ್. ತೃಪ್ತಿ ಹಾಗೂ ಸುತ್ತೂರು ಜೆಎಸ್‌ಎಸ್ ಪ್ರೌಢಶಾಲೆಯ ಕು. ಬಿ.ಎಂ. ಅಕ್ಷಯ್, ಕು. ಎಸ್.ಎನ್. ದಿಲ್ವರ್‌ಸಾಬ್, ಕು. ಜಿ.ಪಿ. ಮಡಿವಾಳಪ್ಪ, ಕು. ಪೂಜಾ ಹಿರೇಮಠ, ಕು. ಎಫ್. ಸಂಗಮೇಶ್, ಕು. ಎಸ್.ಬಿ. ಗೌರಿ, ಕು. ಸೌಮ್ಯ, ಕು. ಯಶ್ವಂತ ಅವರುಗಳು ತೇರ್ಗಡೆ ಹೊಂದಿದ್ದಾರೆ.

***

## ಕೊರೋನಾ ವಾರಿಯರ್ಸ್‌ಗಳಿಗೆ ಚಪ್ಪಾಳೆ ತಟ್ಟಿ ಗೌರವ



ಮೈಸೂರಿನ ಶ್ರೀ ಸುತ್ತೂರು ಶಾಖಾಮಠದಲ್ಲಿ ಮಾರ್ಚ್ 22ರಂದು ಪರಮಪೂಜ್ಯ ಜಗದ್ಗುರುಗಳವರ ನೇತೃತ್ವದಲ್ಲಿ ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರ ಮೋದಿಯವರು ಕರೆ ನೀಡಿದ್ದ ಕೊರೋನಾ ಸೋಂಕಿತರು ಗುಣಮುಖರಾಗಲು ಶ್ರಮಿಸುತ್ತಿರುವ ಕೊರೋನಾ ವಾರಿಯರ್ಸ್‌ಗಳಿಗೆ ಪ್ರೋತ್ಸಾಹಿಸುವ ಅಭಿಯಾನದಲ್ಲಿ ಶ್ರೀಮಠದಲ್ಲಿನ ಗುರುಕುಲ ಸಾಧಕರು ಹಾಗೂ ಸೇವಾಸಿಬ್ಬಂದಿಗಳು ಚಪ್ಪಾಳೆ ತಟ್ಟಿ, ಗಂಟೆ, ಜಾಗಟೆ ಬಾರಿಸಿ ಗೌರವ ಸಲ್ಲಿಸಿದರು

## ಜೆಎಸ್‌ಎಸ್‌ನಿಂದ ಮೂವಬಲ್ ಐಸಿಯು ಪ್ರಾತ್ಯಕ್ಷಿಕೆ




ಜೆಎಸ್‌ಎಸ್ ಉನ್ನತ ಶಿಕ್ಷಣ ಹಾಗೂ ಸಂಶೋಧನಾ ಅಕ್ಯಾಡೆಮಿ ಮತ್ತು ಐಡಿಯಾಸ್ ಅನ್ ಲಿಮಿಟೆಡ್ ಸಂಸ್ಥೆಗಳು ಜಂಟಿಯಾಗಿ ಸಂಶೋಧಿಸಿ, ಸಿದ್ಧಪಡಿಸಿರುವ, ಮೂವಬಲ್ ಐಸಿಯು, ದಂತಚಿಕಿತ್ಸೆ ಕುರ್ಚಿಗಳು ಸ್ಯಾನಿಟೈಜರ್ ಹಾಗೂ ಇತರ ಉಪಕರಣಗಳ ಪ್ರಾತ್ಯಕ್ಷಿಕೆಯನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯಸಾನ್ನಿಧ್ಯದಲ್ಲಿ ಸಚಿವರುಗಳಾದ ಶ್ರೀ ಜಗದೀಶ್ ಶೆಟ್ಟರ್, ಶ್ರೀ ಎಸ್.ಟಿ. ಸೋಮಶೇಖರ್, ಶ್ರೀ ಭೈರತಿ ಬಸವರಾಜ್, ಮೇಯರ್ ಶ್ರೀಮತಿ ತಸ್ನೀಮ್, ಶಾಸಕರುಗಳಾದ ಶ್ರೀ ಎಸ್.ಎ. ರಾಮದಾಸ್, ಶ್ರೀ ಜಿ.ಟಿ. ದೇವೇಗೌಡ, ಕುಲಪತಿಗಳಾದ ಡಾ. ಸುರೀಂದರ್ ಸಿಂಗ್, ಡಾ. ಸಿ.ಜಿ. ಬೆಟಸೂರಮಠ, ಮಾಜಿ ಶಾಸಕರಾದ ಶ್ರೀ ಎಂ.ಕೆ. ಸೋಮಶೇಖರ್, ಡಾ. ಶ್ರೀನಿವಾಸಮೂರ್ತಿ, ಡಾ. ಬಿ. ನಂದಲಾಲ್, ಶ್ರೀ ನಾಗೇಂದ್ರ ಆರ್. ಶೆಟ್ಟಿ ಹಾಗೂ ಇತರರು ವೀಕ್ಷಿಸುತ್ತಿರುವುದು



ಬೆಂಗಳೂರಿನ ಜೆಎಸ್‌ಎಸ್ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಸಂಸ್ಥೆಯಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯಸಾನ್ನಿಧ್ಯದಲ್ಲಿ ಆಯೋಜಿಸಿದ್ದ ಕೇಂದ್ರೀಯ ನಾಗರಿಕ ಸೇವೆಗಳು ಹಾಗೂ ಕರ್ನಾಟಕ ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳಿಗೆ ಆಯ್ಕೆಯಾದವರಿಗೆ ಅಭಿನಂದನಾ ಸಮಾರಂಭದಲ್ಲಿ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪನವರು, ಸಚಿವರಾದ ಶ್ರೀ ಆರ್. ಅಶೋಕ್ ಮತ್ತಿತರ ಗಣ್ಯರನ್ನು ಕಾಣಬಹುದು



ಮೈಸೂರಿನ ಜೆಎಸ್‌ಎಸ್ ವಿಶೇಷ ಚೇತನರ ಪಾಲಿಟೆಕ್ನಿಕ್ ಕಾಲೇಜಿನ ವಿದ್ಯಾರ್ಥಿಗಳು ಬಾಗಲಕೋಟೆಯಲ್ಲಿ ನಡೆದ 43ನೇ ರಾಜ್ಯಮಟ್ಟದ ಕ್ರೀಡಾಸ್ಪರ್ಧೆಯಲ್ಲಿ ಭಾಗವಹಿಸಿ ಬಹುಮಾನ ಪಡೆದ ಸಂದರ್ಭದಲ್ಲಿ ವಿದ್ಯಾರ್ಥಿಗಳೊಂದಿಗೆ ಪ್ರಾಂಶುಪಾಲರು ಮತ್ತು ಸಿಬ್ಬಂದಿ ವರ್ಗದವರಿದ್ದಾರೆ

## ಮೈಸೂರಿನ ಸುತ್ತೂರು ಶ್ರೀಮಠದಲ್ಲಿ ಬಸವ ಜಯಂತಿ



ಬಸವಣ್ಣನವರು ಸಮಾಜದ ಅಸಮಾನತೆಯನ್ನು, ಅನಿಷ್ಟ ಪದ್ಧತಿಗಳನ್ನು ತೊಡೆದು ಹಾಕಿದ ಪ್ರಭಾವಿ ಸಮಾಜ ಸುಧಾರಕರೆಂದು ಗುರುತಿಸಿ ಗೌರವಿಸಲಾಗುತ್ತಿದೆ. ಅದೆಲ್ಲದಕ್ಕೂ ಜೀವ ಚೈತನ್ಯ ಸ್ವರೂಪವಾದ ಅವರ ಆಧ್ಯಾತ್ಮಿಕ ಸಾಧನೆ, ಸಿದ್ಧಿ, ಸಂದೇಶಗಳ ಕಡೆಗೂ ಇನ್ನು ಮುಂದೆ ಹೆಚ್ಚಿನ ಗಮನಹರಿಸಬೇಕಾದುದು ಅಗತ್ಯವಾಗಿದೆ ಎಂದು ಆಲಮಟ್ಟಿಯ ಡಾ. ಶ್ರೀ ರುದ್ರಮುನಿದೇವರು ತಿಳಿಸಿದರು.

ಮೈಸೂರಿನ ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿರುವ ಶ್ರೀ ಸುತ್ತೂರು ಶಾಖಾಮಠದಲ್ಲಿ ದಿನಾಂಕ 26.4.2020 ರಂದು ಸರಳ ಹಾಗೂ ಅರ್ಥಪೂರ್ಣ ರೀತಿಯಲ್ಲಿ ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ನಡೆದ ಬಸವ ಜಯಂತಿಯಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಸುತ್ತೂರು ಶ್ರೀಮಠದ ಕಿರಿಯ ಶ್ರೀಗಳಾದ ಶ್ರೀ ಜಯರಾಜೇಂದ್ರರವರು, ಮರೆಯದೇ ಪೂಜಿಸು ಕೂಡಲಸಂಗಮನ ಎಂದು ಬಸವಣ್ಣನವರು ತಿಳಿಸಿರುವಂತೆ ಮನುಷ್ಯ ತನ್ನ ವ್ಯಾವಹಾರಿಕ ಜೀವನ ಕ್ರಮದಲ್ಲಿ ಸದಾ ಭಗವಂತನ ಸ್ಮರಣೆಯಲ್ಲಿದ್ದು, ಬದುಕನ್ನು ಸಾರ್ಥಕಗೊಳಿಸಿಕೊಳ್ಳಬೇಕೆಂದು ತಿಳಿಸಿದರು. ಗುರುಕುಲದ ಸಾಧಕರಾದ ಶ್ರೀ ಇಮ್ಮಡಿ ಮುರಘೀ ಸ್ವಾಮಿಗಳು, ಶ್ರೀ ಕುಮಾರದೇವರು, ಶ್ರೀ ರುದ್ರಯ್ಯದೇವರು ಹಾಗೂ ಶ್ರೀ ಗಿರೀಶ್‌ರವರು ಮಾತನಾಡಿ ಬಸವಣ್ಣನವರ ಜೀವನ ಸಾಮಾಜಿಕ ಸಮತೋಲನಕ್ಕೆ ಸಾಕ್ಷಿಯಾಯಿತು. ಮಾನವರು ಜಾತಿ, ಮತ, ಧರ್ಮ, ಕುಲ ಭೇದ ಮರೆತು ಭಗವಂತನ ಸಾಕ್ಷಾತ್ಕಾರ ಮಾಡಿಕೊಳ್ಳಲು ಮಾರ್ಗದರ್ಶಿಯಾಗಿ ಸಮಾಜಕ್ಕೆ ದಾರಿದೀಪವಾದರು. ಕಳಬೇಡ, ಕೊಲಬೇಡ ಎಂದು ಅವರು ಬೋಧಿಸಿದ ಸಪ್ತಸೂತ್ರಗಳು ಜನತೆಯ ಬದುಕಿಗೆ ಸಂಜೀವಿನಿಯಾಗಿವೆ ಎಂದು ತಿಳಿಸಿದರು.

ಪ್ರಾರಂಭದಲ್ಲಿ ಶ್ರೀ ಬಸವೇಶ್ವರರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ಧೂಪಾರತಿ–ದೀಪಾರತಿ ಬೆಳಗಿ, ಪುಷ್ಪಾರ್ಚನೆ ಸಲ್ಲಿಸಿ ಸಾಮೂಹಿಕವಾಗಿ ವಚನ ಗಾಯನ ಮಾಡಲಾಯಿತು. ಶ್ರೀ ಬಿ.ಎಂ. ಕುಮಾರ್ ಹಾಗೂ ಶ್ರೀ ಎಸ್. ನಿಜಗುಣರವರು ವಚನ ಗಾಯನ ಮಾಡಿದರು. ಶ್ರೀ ಕೆ.ಎಸ್. ಶಿವಪ್ರಸಾದ್ ಸ್ವಾಗತಿಸಿದರು. ಶ್ರೀ ಆರ್.ಎಸ್. ನಂಜುಂಡಸ್ವಾಮಿ ವಂದಿಸಿದರು. ಶ್ರೀ ಕುಮಾರಸ್ವಾಮಿ ವಿರಕ್ತಮಠ ಕಾರ್ಯಕ್ರಮ ನಿರೂಪಿಸಿದರು.

## MATHRUBHASHA DIWAS 2020

Mathrubhasha Diwas was celebrated at JSS STU, Mysuru on 25.2.2020. Dr. L. Jawahar Nesan, Vice-Chancellor, was the Chief Guest. Dr. K.S. Lokesh, Registrar, was the Guest of Honour. Dr. T.N. Nagabhushan, presided over the function. Speaking on the occasion, Dr. L. Jawahar Nesan highlighted the importance of mother tongue and its influence on human values and culture. Dr. K.S. Lokesh stressed upon the effectiveness of instilling love for mother tongue right from childhood and its influence on societal growth. Dr. T.N. Nagabhushan expressed the beauty and effectiveness of communication through mother tongue and also highlighted the beauty of Kannada language, and its literary personalities.

Prof. H.S. Ambika, who organised this event., emphasised that 'Mathrubhasha Diwas' is an important day that reminds everyone to understand the beauty of the mother tongue and the culture it brings along in shaping and moulding the people. She also highlighted that every language has its own speciality and richness to cherish. She stated that the students at JSS STU are always in the forefront in honouring the culture of the country and valuing the literary works in mother tongue, with all seriousness.

In-charge Principal Prof. M.S. Prabhuswamy, Prof. H.S. Ambika, Prof. Shailaja, faculty members, non-teaching staff and students were also present on the occasion.

## FREE NATUROPATHY & YOGA HEALTH AWARENESS CAMP

The above camp was held on 29.2.2020 at the Annamalai Hotel, Chella Mahal, Coimbatore, with the inaugural ceremony. Dr. S.A. Dinesh, Rotaract Co-Ordinator and Dr. M. Ezhil Ratnakumari, Professor-cum-Senior Medical Officer inaugurated the camp by lighting the lamp. Rotary members from various clubs attended the camp. 51 people visited the camp. Free consultation, free blood pressure and blood glucose level check-up, diagnosis through naturopathic methods like iris diagnosis and pulse diagnosis, diet prescription, therapeutic yoga session, accupuncture, therapeutic diet display, natural way of food preparation for sale and health products and books counter were displayed in the camp. The camp comprised of six health talk sessions (on obesity, hypertension and diabetes infertility, back/ knee pain and psoriasis). The camp was concluded with the valedictory ceremony having Rotasia Liaison Officer, Rtrn. P.P. Rick Mukherjee, as the Special Invitee.

□

## COLLEGE DAY HELD

Twentysecond College Day celebrations of JSS Institute of Naturopathy and Yogic Sciences, Coimbatore was held on 8.8. 2020. Dr. M. Palaniswamy, Registrar, Karpagam Academy of Higher Education, Coimbatore was invited as the Chief Guest. Smt. Thara Ramesh, Director, Narthanam School of Dance, Coimbatore was invited as the Guest of Honour. The College Day celebration began with invocation followed by lighting lamp by the dignitaries by 5 p.m.

Dr. T. Selvameenakshi welcomed the gathering. The Annual Report for the academic year 2018–19 was read by the Principal, Prof. Dr. Naveen G. Halappa. The Souvenir for the academic year 2018–19 named 'Srishti' was released by the dignitaries. Memorandum of understanding was signed between JSS Institute of Naturopathy and Yogic Sciences, Coimbatore and Karpagam Academy of Higher Education, Coimbatore. Dr. M. Palaniswamy addressed the gathering with his motivating speech to work more on the research aspects related to the system of Naturopathy and Yoga. Smt. Thara Ramesh, through her address, motivated the youngsters to involve themselves in dance and get relieved from stress.The academic achievement awards for the year 2018-19 were distributed. The recipients of the awards are as follows:

### Final Year

Jindal Gold Medal – Ms. Mahisha
First Rank – Ms. Mahisha
Second Rank – Ms. Tamilselvii

### Third Year

First Rank – Ms. Khushboo Jain. K
Second Rank – Ms. Sushanthikaa. V. B

### Second Year

First Rank – Ms. Sharon. N
Second Rank – Ms. Azuma

### First Year

First Rank – Ms. Shakthi Sridevi. N
Second Rank – Ms. Nivedha. N

The best faculty award was bagged by Dr. M. Ezhil Ratnakumari. The best faculty article award was received by Dr. M. Ezhil Ratnakumari and, Dr. Jincy Sundaran received the 2nd prize The best internee award was received by Dr. M. Priyanka and the best student award by Ms. Anandhi. Mementos were presented to all the faculty members.

The winners of the cultural competitions were awarded prizes and certificates. A few performances that stole the heart of the audience during cultural programme were presented by the students in the college day celebration, which was a cultural retreat. The overall championship for sports was won by the team "Asgard Assassins". The overall championship for culturals was won by the final year students. Dr. K.S. Preethi delivered the vote of thanks. The Masters of the programme were Ms. Azuma and Ms. Ashwathika. The Programme was concluded with National Anthem followed by a grand dinner.

□

# GRADUATION DAY CELEBRATED

Seventeenth Graduation Day was celebrated at JSS Institute of Naturopathy and Yogic Sciences, Coimbatore on 8.8. 2020. Dr. Raghavendra Rao, Director, Central Council for Research in Yoga and Naturopathy, Ministry of AYUSH, Govt. of India was invited as the Chief Guest. Sri R. Mahesh, Director, Medical Education Division, JSS Mahavidyapeetha, Mysuru was to presided over the function and Sri S. Sathyan, Retired IAS Officer was the Guest of Honour. Dr. Rajesh Udupadi, Principal, JSS Ayurveda College, Mysuru attended the ceremony, on behalf of Sri R. Mahesh.

The Graduation Ceremony commenced with academic procession followed by invocation and lamp lighting. Principal, Welcomed the auchience Prof. Dr. Naveen G. Halappa Administration of oath was also done by the Principal. B.N.Y.S degree was awarded to the graduates, by the dignitaries. A memento of organic seed pencil was presented to the graduates all.

Dr. Raghavendra Rao gave the Graduation Day address. The students was motivated by his encouraging speech on the beneficial effects of Yoga on cancer. Sri. S. Sathyan spoke about the responsibilities of a doctor towards the society which was a real treasure to the new graduates. Dr. Rajesh Udupadi briefed the gathering about the importance of Naturopathy and Yoga as a drugless system of medicine which proves effective in the treatment of non-communicable diseases. Graduates, Dr. R. Jenie and Dr. M. Oviya gave positive feedback about the activities (academic, clinical, extracurricular and outreach activities) of JSSINYS. Academic toppers were awarded with shields and certificates by the dignitaries. The recipients of awards were Dr. M. Priyanka, Dr. Nantihini and K. Rajanderan.

The dignitaries were honoured by the Principal. Vote of thanks was done by Dr. M. Ezhil Ratnakumari. The ceremony was concluded by National Anthem followed by group photo session. The Master of Ceremony was Dr. Jincy Sundaran.

There was an academic exhibition at the college premises organized by the students. The dignitaries visited the stalls of the exhibition after the completion of Graduation Day celebration. The programme was concluded by 12 hours.

**ಜೆಎಸ್‌ಎಸ್ ಸಂಸ್ಥೆಗಳಲ್ಲಿ ನಡೆಯುವ ಕಾರ್ಯಕ್ರಮದ ವರದಿಗಳು ಮತ್ತು ಛಾಯಾಚಿತ್ರಗಳನ್ನು ಜೆಎಸ್‌ಎಸ್ ಮಾಸಪತ್ರಿಕೆಯ ಈ ಇಮೇಲ್ ವಿಳಾಸಕ್ಕೆ ಕಳುಹಿಸುವುದು**

**email:jssmasapatrike@gmail.com**

# GRADUATES RECEPTION – 2020 HELD

JSS Medical College, Mysore, organized its Graduates' Reception on 13.3.2020 at Sri Rajendra Auditorium, in the Divine Presence of H.H. Jagadguru Sri Shivarathri Deshikendra Mahaswamiji, Chancellor, JSS AHER. Dr. H. Vindo Bhat, Vice-Chancellor of Manipal Academy of Higher Education was the Chief Guest.

Dr. H. Basavanagowdappa, Principal, of the College, welcomed the gathering and congratulated the newly graduating students and their parents for successfully securing the graduate degree in Medicine. He also highlighted various academic and research credentials of JSS Medical College, at national and internationals levels.

Dr. Y.S. Ravikumar, Professor, Department of General Medicine, JSS Medical College administered the Hippocratic Oath, an important component in practicing the medical profession to all the graduating students.

Nine meritorious students received Gold Medals and Cash Prizes for their academic excellence. Dr. Preethi Prakash Prabhu received five gold medals and five cash prizes for her performances in the 2020 batch.

Dr. Jayadev Betkerur, Professor, Department of Dermatology and Dr. Sahana, Postgraduate alumuus of Dermatology, were honoured with the prestigious Prof. Y.T. Thathachari Endowment Prize for the "Best Research Publication. Dr. S. Hemamalini, Associate Professor, Department of Anatomy, Dr. S. Suchita Associate Professor of Pathology, Dr. Anitha T. Girish, Associate Professor of Ophthalmology and Dr. M.D. Ravi, Professor of Paediatrics were honoured with Best Teacher Award on this occasion.

Dr. H. Vinod Bhat, Vice-Chancellor of MAHE distributed Graduation Certificates to 202 students who had successfully completed their MBBS course. Newly graduating students shared their experience in the college and expressed their gratitude to the teachers, for carving out their academic career. Parents of the students described their experiences as proud parents of budding doctors and thanked the College for providing wonderful academic environment for their wards in learning the medicine and humanity.

Delivering the graduation day speech, Dr. H. Vinod Bhat, Manipal congratulated all the graduates for successfully completing their MBBS programme and all the parents and teachers for supporting them in this endeavour. He also extended his appreciation to JSS Academy of Higher Education & Research and JSS Medical College for upholding the quality of medical education in the country and showing enormous growth as an

academic and research institution at the global level.

Dr. Bhat appreciated the role of women in the medical field and described how a woman plays a multitasking role as mother, doctor, teacher, and caregiver. He deliberated on changing patterns and trends in medical education across the world and expressed his concern on quality of medical education in India due to enormous increase in the medical colleges in the country.

He urged the graduates to take up rural health service which will help them to understand the ground realities in healthcare delivery at a resource-limited setting like villages. Dr. Bhat appealed to the students to be the agents of change and catalysts for the healthcare of community.

In his presidential address, Dr. C.G. Betsurmath, Executive Secretary, JSS Mahavidyapeetha emphasized the importance of adapting technological advancements like brain net, biotechnology, human bodyshop in medical care. In the constantly changing world, there is a need to update professional expertise with all possible knowledge and skills for their survival.

Bestowing the blessings to the new graduates, H.H. Jagadguru Sri Shivarathri Deshikendra Mahaswamiji urged the students to serve humanity with commitment and passion. There is a major drift in doctor-patient relationships in recent medical practice which is an indispensable factor in achieving reasonable clinical outcomes. One can enjoy a deep sense of satisfaction from a good doctor-patient relationship, but it can also be a source of discomfort to both doctors and patients once this relationship is disturbed. The voice of suffering and helpless people is disappearing in the medical industry and the doctors are also becominghelpless to the extent of turning the human society into an arid space sans emotions. India is a cradle of wisdom and human knowledge has always held an inseparable unity between the animate and inanimate objects on this planet. Indian philosophy is the greatest synthesis in the history of human civilization.

The modern medical practice appears to be ridden with contradictions for the common man as the power equation between doctor and patient is not equal. A patient feels at times that he is at mercy of not just a doctor but the whole medical system. He feels that the doctor is looking at an organ rather than the whole system given his specialization, and how these organs are put together is nobody's responsibility. Because of this situation, the whole breed of general practitioners has vanished.

There is a beautiful saying in Sanskrit, "Vaidyo Narayano Harihi" which means doctor is God, because, he provides that last ray of hope to the sick person. The graduates of today are a major

investment for building a better India. Future health of any nation lies with the talents, skills and knowledge of the young medical graduates. Medical education is a life long dedication for which one must be prepared to accept, he opined.

***

Inauguration of Skill & Simulation Centre.

JSS Academy of Higher Education & Research, Mysore established a Skill and Simulation Centre set up at a cost of Rs. 22 crores, at the third floor of old OPD Block, JSS Hospital, M.G. Road, Mysuru.

The centre was inaugurated by Dr. Rakeshkumar Vats, Secretary-General, Medical Council of India in the Divine Presence of H.H. Jagadguru Sri Shivarathri Deshikendra Mahaswamiji on 14.3.2020. Dr. C.G. Betsurmath, Executive Secretary, JSSMVP, presided over the function. Dr. B. Suresh, Pro-Chancellor and Dr. Surinder Singh, Vice-Chancellor of JSS AHER were Guests of Honour. Dr. Manjunatha, Registrar and Dr. (Col.) M. Dayananda were present on the occasion.

After MCI Secretary General and dignitaries lighted the lamp, guests walked through the Skill and Simulation Centre. They were appraised about all the skill trainers, high fidelity simulators and surgical simulators along with the facilities available at the Centre.

Dr. H. Basavanagowdappa, Principal, JSS MC, welcomed the dignitaries. An overview of the Centre was presented by Dr. S. Archana Co-ordinator.

After invocation by Dr. Sowmya, the Chief Guest, Dr. Rakeshkumar Vats delivered the inaugural address. He appreciated the efforts taken up by JSS AHER to establish a state of art centre like this and wished it to become a centre of excellence. He also updated the audiences about MCI norms and regulations and the new curriculum.

Brochure of JSS AHER Skill and Simulation Centre was released on the occasion by Dr. B. Suresh, Pro-Chancellor.

The main service providers to the Centre, Sri Ashok Kapoor, Vishal Surgicals, Sri Sivaram Rajagopalan from Laerdal and Sri Manjunath from Rasme Consultancy, Bengaluru were felicitated by His Holiness on this occasion, who later delivered the Benediction Speech.

Vote of thanks was given by Smt. M.S. Kokila, Deputy Registrar, JSS AHER.

## AIISH AWAAZ 2020

Students of JSS Institute of Speech & Hearing Mysuru actively participated in various cultural events conducted at AIISH AWAAZ, between 27th -29th Feb. 2020. The event was organized by the All India Institute of Speech & Hearing, Mysuru. Students of our Institute have won 9 First Prize and 5 Second Prize and they have also won the OVERALL TROPHY for securing highest points in the event. This is for the fifth consecutive time that the students have won the Overall Trophy.

# JSS LAW COLLEGE, MYSURU



The College, in association with Surana and Surana International Attorneys, Chennai jointly organied the 18th Surana and Surana National Corporate Law Moot Court Competition from 7th-9th Feb. 2020 in which 24 teams from across the country participated in it.

The inaugural programme inaugurated on 8.2.2020 by Hon'ble Justice B.A. Patil, Judge, Karnataka High Court. Prof. P. Ishwar Bhat, Vice-Chancellor–KSLU presided over the programme, Dr. C.G. Betsurmath, Executive Secretary, JSS Mahavidya peetha, Mysuru was the Chief Guest. Dr. Vinod Surana, Managing Partner & CEO, SSIA, Chennai, Prof. K. S. Suresh, Chief Executive, JSS Law College and Dr. Ravichandra, Advocate Head-Academic Initiatives, SSIA, Chennai were the Guests of Honour. Prof. M.P. Nagendra Murthy, Coordinator, other staff members and students and special invitees were also present.

Hon'ble Justice B.A. Patil delivered the inaugural address where he observed that the moot competitions stimulate scholastic experience. He Lordship concluded the address highlighting the ethics and culture of mooting as 'Knowledge with humbleness'. Dr. Ishwar Bhat gave the Presidential Address. Dr. S. Nataraju expressed by vote of thanks

The Valedictory programme began in the evening Dr. S. Nataraju gave welcome speech. The chief guests were Hon'ble Justice Arvind Kumar, Judge, High Court of Karnataka, Sri. Prabhuling Navadgi, Advocate General for Karnataka, Dr. Sudhir Krishnaswamy, Vice-Chancellor, NLSIU, Bengaluru. The guests of honour were Smt. Jayna Kotjhari, Senior Advocate and Executive Director, Centre for Law & Research, Sri Ashuthosh Chandra, Hon'ble Member, NCLT, Dr. Vinod Surana, Managing Partners and CEO, SSIA, Chennai, and Prof. K.S. Suresh, Chief Executive and many Judges from Mysore Law Courts.

Hon'ble Justice Arvind Kumar, in his Valedictory address, emphasised the importance of mooting and research along with his life experience as an advocate and also recollected the difficulties in organising the moot competition. He expressed that by mere participation in Moot Court competition, the mooter gets good knowledge. He also threw light on the significance of 'Punctuation' while writing judgements and also spoke on court mannerisms. He also mentioned about the problems in litigation and how Alternative Dispute Resolution and mediation played a significant role in cutting down delay of cases in the courts. He concluded his speech by emphasising on pursuit of excellence in their career. Dr. Sudhir Krishnaswamy, in his speech, focused on conflicts in the core develop ment of the Insolvency and

Bankruptcy Code. The presidential remark was given by Sri Prabhuling Navadgi referred to Sec. 7 of the Insolvency and Bankruptcy Code and the context of lease therein.

Dr. Ravichandran announced the results of the competition followed by distribution of participation certificates to all the participants. The awards include Best Memorials award secured by the Institute of Law, NIRMA University and won cash prize of Rs.10,000/-, Best Student Advocate award was won by Shubham Nahata of Hidayatullah National Law University who won the cash prize of Rs.10,000/-, the Spirit of Surana Title was won by School of Law, University of Petroleum and Energy Studies, Hidayathullah National Law University secured the third place, Institute of Law, NIRMA University secured the Third Place, Runner-up team was Symbiosis Law School, Noida who won cash prize of Rs.15,000/- and the Winning Team was RGNUL, Punjab and won the cash prize of Rs.30,000/-. The Best Speaker of Final Round was won by Anmol Mahajan of RGNUL, Punjab.

As an IQAC initiative the college had arranged a special talk by Dr. Vinod Surana, Managing Partners and CEO, SSIA – Chennai, addressing the final year students on Career Prospects in Corporate Taxation and Corporate Law Compliances on 9.2.2020.

Smt. M. Tejaswini, Course Teacher arranged industrial visit for IV Semester B.B.A., LL.B students to Karnataka Milk Federation, Mysuru on 15.2.2020.

Rotaract Club organised Pani to Police Project on 15.2.2020 with an objective to acknowledge the hard work of the traffic police. The project was lead by Miss Roshini of VIII semester B.A., LL.B along with the Rotaractors and water, juice, biscuits were distributed to the traffic police who worked hard day and night to maintain traffic in the city.

Smt. G. Asmathunnisa participated and presented paper on topic 'A Critical analysis of Criminal Law Amendment Act 2018 with special reference to rape provisions' at National Seminar on Gender Sensitisation: Equality and Opportunities organised by Women Welfare committee, Maharani's College of Commerce and Management, Mysuru on 27.2.2020.

Smt. G. Asmathunnisa (co-author) presented a paper on the topic Human Rights and Social Justice during One Day National Seminar on 'Adaptability of the Indian Constitution in Changing Dimensions' at Al-Ameen Law College, Bengaluru on 28.2.2020.

Dr. N. Vani Shree (co-author) participated and contributed in the 'International Conference on Impact of Languages, Literature and Education on Intellectual Property Rights–2020 for the paper titled 'The exemplification of linguistics in copyrights law' at Sir C.R. Reddy College, Eluru, Andhra Pradesh on 28th and 29th Feb 2020. (The abstract has been published with ISBN 978-81-944859-5-7; the paper has been published in the Arts and Education International Research Journal with ISSN 2349-1353, Volume 7, Issue 1, 2020; the paper has been published in a book titled 'Impact of Language, Literature and Education' with ISBN 978-81-944859-8-8).

Smt. Swapna Jangamashetti (co-author) participated and contributed in the 'International Conference on Impact of Languages, Literature and Education on Intellectual Property Rights – 2020 for the paper titled 'Gender mainstreaming crade to grave – need of the time' at Sir C.R. Reddy College, Eluru, Andhra Pradesh on 28th and 29th Feb 2020. (The abstract has been published with ISBN 978-81-944859-5-7; the paper has been published in the Arts and Education International Research Journal with ISSN 2349-1353, Volume 7, Issue 1, 2020; the paper has been published in a book titled 'Impact of Language, Literature and Education' with ISBN 978-81-944859-8-8).

Sri Jagadish A.T. (co-author) participated and contributed in the International Conference on Impact of Languages, Literature and Education on Intellectual Property Rights–2020 for the paper titled 'Registration of Domain Names and its Administration' at Sir C.R. Reddy College, Eluru, Andhra Pradesh on 28th and 29th Feb 2020. (The abstract has been published with ISBN 978-81-944859-5-7; the paper has been published in the Business Sciences International Research Journal with ISSN 2349-1353, Volume 8, Issue 1, 2020; the paper has been published in a book titled 'Global Trends in Social and Business Sciences' with ISBN 978-81-944859-7-1).

### Students' Awards/Accomplishments/ Participation

Miss. M. Nandana of VI Semester B.B.A., LL.B participated in the 10th School of Law National Conference on Traversing the Contours of Developments in Indian Constitutionalism organised by Christ University, Bengaluru on 23.1.2020 and 24.1.2020.

Miss S.P. Srilakshmi of VIII semester B.B.A., LL.B participated in the One day Seminar on Intellectual Property Rights and Cyber Laws organised by Holla Associates in association with Prestige Group at Radisson Blu, Palace Road, Bengaluru on 25.01.2020.

The College Annual Inter Class Athletic meet was conducted on 01.02. 2020 at Mysore University Oval Ground.

Cadet Swathi M. Shet of our college had attended the Prestigious Republic Day Parade at New Delhi on 26.1.2020. She attended the Pre-RDC camps at Bengaluru during November and December 2019 to qualify for the same. During the de-kitting camp she was honoured and congratulated by the Chief Minister and Governor of Karnataka at Vidhan Soudha on 5th and 6th Feb 2020.

Miss Neerja Rajesh of VI Semester B.B.A., LL.B participated and won the Best Delegate award representing New zealand, in the Sochum Committee, during the BITSMUN-Annual International Model United Nations Conference of BITS Pilani, Goa from 31.1.2020 to 1.2.2020.

Miss A. Samvedana of II Semester B.B.A., LL.B got first prize in the competition on Recent Amendments to the Karnataka State Acts organised by the Library Committee on 5.2.2020.

Miss Neerja Rajesh of VI Semester B.B.A., LL.B participated and presented a paper on 'Decriminalisation of Prostitution: How the Kiwis got it right' in the

International Seminar on Realisation of Human Rights of Women –Changing Dimensions, Challenges and Recourse held on 6.2.2020 and 7.2.2020 organised by the Centre for Women and Family Studies, The National University of Advanced Legal Studies, Kochi, Kerala.

The College Inter Class Foot ball Competition was held on 11.2.2020 and 12.2.2020 at Kannegowda Sports Ground, Kuvempunagar, Mysore.

Mr. Soorya Patel of VIII Semester B.B.A., LL.B participated in the Tobacco Control Workshop held in KSLU, Hubballi on 13.2.2020.

Mr Thapo Shreshta and Mr. Anup of IV Semester B.A., LL.B participated and secured 1st Place in the Treasure Hunt organised by Sapient College of Commerce and Management, Mysuru on 28.2.2020.

Miss Mariyam Irshad Rula of VIII Semester B.B.A., LL.B (co-author) participated and contributed in the International Conference on Impact of Languages, Literature and Education on Intellectual Property Rights – 2020 for the paper titled 'The exemplification of linguistics in copyrights law' at Sir C.R. Reddy College, Eluru, Andhra Pradesh on 28.2.2020 and 29.2.2020. (The abstract has been published with ISBN 978-81-944859-5-7; the paper has been published in the Arts and Education International Research Journal with ISSN 2349-1353, Volume 7, Issue 1, 2020; the paper has been published in a book titled 'Impact of Language, Literature and Education' with ISBN 978-81-944859-8-8).

Miss Pavni Randeo of VIII Semester B.B.A., LL.B (co-author) participated and contributed in the 'International Conference on Impact of Languages, Literature and Education on Intellectual Property Rights–2020 for the paper titled 'Gender mainstreaming crade to grave–need of the time' at Sir C.R. Reddy College, Eluru, Andhra Pradesh on 28.2.2020 and 29.2.2020. (The abstract has been published with ISBN 978-81-944859-5-7; the paper has been published in the Arts and Education International Research Journal with ISSN 2349-1353, Volume 7, Issue 1, 2020; the paper has been published in a book titled 'Impact of Language, Literature and Education' with ISBN 978-81-944859-8-8).

Miss Pavni Randeo of VIII Semester B.B.A., LL.B s(co-author) participated and contributed in the International Conference on Impact of Languages, Literature and Education on Intellectual Property Rights – 2020 for the paper titled 'Registration of Domain Names and its Administration' at Sir C.R. Reddy College, Eluru, Andhra Pradesh on 28.2.2020 and 29.2.2020. (The abstract has been published with ISBN 978-81-944859-5-7; the paper has been published in the Business Sciences International Research Journal with ISSN 2349-1353, Volume 8, Issue 1, 2020; the paper has been published in a book titled 'Global Trends in Social and Business Sciences' with ISBN 978-81-944859-7-1).

Miss S. Karthiyani, Mr Bilcham A Sangma and Mr P.S. Veeresh of IV Semester B.A., LL.B participated in the XXIV All India Moot Court Competition held from 28.2.2020 to 1.3.2020 organised and held at University Law College, Bangalore University, Bengaluru.

□

# RANKINGS AND CERTIFICATES

**1. JSS Academy of Higher Education & Research, Mysuru** received the following rankings and certificates, recognising the 'quality and excellence. QS I GAUGE has recognised the e- learning initiatives of the Academy during the lockdown.

**2. NIRF 2020**

The Ministry of Human Resource Development released the NIRF India Rankings 2020 on 11.6.2020. Where in the Academy has been ranked 33rd in the 'University' Category.

**3. The rankings of constituent colleges are as follows:**

* JSS College of Pharmacy, Ooty - 9th rank
* JSS Dental College and Hospital, Mysuru - 10th rank
* JSS College of Pharmacy, Mysuru -10th rank
* JSS Medical College, Mysuru - 20th rank

**4. THE Innovation & Impact Ranking**

Times Higher Education (THE) announced the results of Innovation & Impact Ranking 2020 is based on UN's Sustainable Developmental Goals at (SDG), on 22.4.2020. The Academy was ranked between 201-300 globally among 766 HEIs, and 3rd national level.

JSS AHER was ranked among top 100 in three SDGs:

Under SDG 3- Good Health & Well Being,secured 20thrank globally and 1st nationally.

Under SDG 1 - No Poverty and SDG 15 - Life on Land it secured 60th and 73rd Rank globally and 2nd nationally.

**5. E-Learning Excellence for Academic Digitization**

JSS AHER was awarded "E-Learning Excellence for Academic Digitization" Certification by QS I-GAUGE Rating agency. The certification process involved rigorous data collection, evaluation and assessment of performance metrics.

***

**ReThink Tank Session of QS -I Gauge**

Ms. Renita Catelino of JSS College of Pharmacy represented JSS AHER for ReThink Tank session on "Women Entrepreneurship through the lens of Higher Education" and qualified as a finalist in the online interactive session with the Hon'ble Minister for Women & Child Development, on 13.6.2020

JSS AHER has taken timely action to see that teaching and learning activities are not disrupted by COVID-19 crisis. concerted efforts have been made to involve all the stakeholders and deploy the resources available productively. Examinations are being conducted wherever possible and student safety has been taken proper care.

□

ಮೈಸೂರಿನ ಶ್ರೀ ಸುತ್ತೂರು ಶಾಖಾಮಠದಲ್ಲಿ ಕೊರೋನಾ ನಿಯಂತ್ರಣ ಪರಿಹಾರ ಕಾರ್ಯಗಳಿಗಾಗಿ ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ಮೈಸೂರು-ಚಾಮರಾಜನಗರ ಜಿಲ್ಲಾ ವೀರಶೈವ ಮಠಾಧಿಪತಿಗಳ ಗೋಷ್ಠಿಯಿಂದ ಪರಮಪೂಜ್ಯ ಜಗದ್ಗುರುಗಳವರ ಸಮ್ಮುಖದಲ್ಲಿ ಶ್ರೀ ಹೊಸಮಠ, ಶ್ರೀ ಹರವೆ ಮಠ, ಶ್ರೀ ನೀಲಕಂಠಸ್ವಾಮಿ ಮಠ ಹಾಗೂ ಶ್ರೀ ಕುಂದೂರು ಮಠದ ಶ್ರೀಗಳವರು, ಸಹಕಾರ ಮತ್ತು ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಎಸ್.ಟಿ. ಸೋಮಶೇಖರ್‌ರವರಿಗೆ 1.50 ಲಕ್ಷ ರೂ.ಗಳ ಚೆಕ್ಕನ್ನು ನೀಡಲಾಯಿತು. ಚಿತ್ರದಲ್ಲಿ ಶ್ರೀ ಬಿ.ಸಿ. ಪಾಟೀಲ್, ಶ್ರೀ ಅಡಗೂರು ಎಚ್. ವಿಶ್ವನಾಥ್ ಮತ್ತು ಶ್ರೀ ಪ್ರತಾಪ್ ಸಿಂಹರವರಿದ್ದಾರೆ





ಚಾಮರಾಜನಗರದ ಜೆಎಸ್ಎಸ್ ನರ್ಸಿಂಗ್ ಶಾಲೆಯಲ್ಲಿ ನಡೆದ ಜ್ಯೋತಿ ಬೆಳಗುವಿಕೆ ಮತ್ತು ಪ್ರತಿಜ್ಞಾವಿಧಿ ಸ್ವೀಕಾರ ಸಮಾರಂಭವನ್ನು ಗಣ್ಯಅತಿಥಿಗಳು ಮತ್ತು ಸಂಸ್ಥೆಯ ಮುಖ್ಯಸ್ಥರು ಉದ್ಘಾಟಿಸುತ್ತಿರುವುದು



ಬೆಂಗಳೂರಿನ ಎಚ್‌ಬಿಆರ್ ಲೇಔಟ್‌ನಲ್ಲಿರುವ ಜೆಎಸ್ಎಸ್ ಪಬ್ಲಿಕ್ ಶಾಲೆಯಲ್ಲಿ ನಡೆದ ಸಾಂಸ್ಕೃತಿಕ ಸ್ಪರ್ಧೆಗಳ ವಿಜೇತರಿಗೆ ಬಹುಮಾನ ವಿತರಣೆ ಕಾರ್ಯಕ್ರಮದಲ್ಲಿ ಶಾಲೆಯ ಪ್ರಾಂಶುಪಾಲರು ವಿದ್ಯಾರ್ಥಿಗಳಿಗೆ ಪ್ರಶಸ್ತಿಪತ್ರಗಳನ್ನು ವಿತರಿಸಿದರು



ಮೈಸೂರು ಶ್ರೀ ಸುತ್ತೂರು ಶಾಖಾ ಮಠಕ್ಕೆ ಭೇಟಿ ನೀಡಿದ ಆರ್‌ಎಸ್‌ಎಸ್ ಪ್ರಮುಖ್ ಮೋಹನ್ ಭಾಗವತ್‌ರವರು ಪರಮಪೂಜ್ಯ ಜಗದ್ಗುರುಗಳವರಿಂದ ಆಶೀರ್ವಾದ ಪಡೆದರು



ಮೈಸೂರಿನ ಶ್ರೀ ಸುತ್ತೂರು ಶಾಖಾ ಮಠದಲ್ಲಿ ಕೋವಿಡ್-19 ವೈರಾಣು ಸೋಂಕಿನ ಸಂದರ್ಭದಲ್ಲಿ ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರ ಮೋದಿಯವರ ಕರೆಯಂತೆ ಜ್ಯೋತಿ ಬೆಳಗುವ ಅಭಿಯಾನದಲ್ಲಿ ಪರಮಪೂಜ್ಯ ಜಗದ್ಗುರುಗಳವರ ನೇತೃತ್ವದಲ್ಲಿ ಗುರುಕುಲದ ಸಾಧಕರು ಹಾಗೂ ಸೇವಾಸಿಬ್ಬಂದಿಗಳು ಪಾಲ್ಗೊಂಡರು



ಮೈಸೂರು ಶ್ರೀ ಸುತ್ತೂರು ಶಾಖಾಮಠದಲ್ಲಿ ಲೋಕಕ್ಷೇಮಕ್ಕಾಗಿ ಪರಮಪೂಜ್ಯ ಜಗದ್ಗುರುಗಳವರೊಂದಿಗೆ ಸಾಧಕರು ಹಾಗೂ ಸೇವಾರ್ಕರ್ತರು ಲಿಂಗಪೂಜೆ ಮಾಡುತ್ತಿರುವುದು

**ಸಂಪಾದಕ: ಡಾ. ಬಿ. ಪ್ರಭುಸ್ವಾಮಿ ಕಟ್ಟಿವಾಡಿ** ನೆರವು: **ಆರ್.ಎಸ್. ಪೂರ್ಣಾನಂದ** ಸಹ ಸಂಪಾದಕ: **ಮ.ಗು. ಬಸವಣ್ಣ**
ಪ್ರಕಾಶಕರು: ಜೆಎಸ್‌ಎಸ್ ಮಹಾವಿದ್ಯಾಪೀಠ, ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ, ಮೈಸೂರು 570 004
ದೂರವಾಣಿ: 0821-2548212 Extn. 223 * e-mail: jssmasapatrike@gmail.com * website: www.jssonline.org
ಮುದ್ರಣ: ಜೆಎಸ್‌ಎಸ್ ಪ್ರಿಂಟಿಂಗ್ ಪ್ರೆಸ್, ಮೈಸೂರು
**ಬಿಡಿ ಪ್ರತಿ 10 ರೂ.**